# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1588 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 21-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಹಿಂದುಳಿದ ವರ್ಗಗಳ ಗೌಳಿ (ಧನಗರ ಗೌಳಿ) ಜಾತಿಯು ಸರ್ಕಾರದ ಯಾವ ಪಟ್ಟಿಯಲ್ಲಿ ಸೇರಿಸಲಾಗಿದೆಯೇ: (ಜಿಲ್ಲಾವಾರು ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002ರ ಜಾತಿ ಪಟ್ಟಿಯನ್ವಯ ಪ್ರವರ್ಗ-1ರ ಕ್ರಮ ಸಂಖ್ಯೆ: 86 (ಹೆಚ್) ನಲ್ಲಿ ಗೌಳಿ ಜಾತಿಯನ್ನು ಹಾಗೂ ಪ್ರವರ್ಗ-2ಎ ರಡಿಯ ಕ್ರಮ ಸಂಖ್ಯೆ: 7(ಸಿ) ರಡಿ ಧನಗರ್ ಜಾತಿಯನ್ನು ಸೇರಿಸಲಾಗಿದೆ (ಜಾತಿ ಪಟ್ಟಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ). |
| ಆ) | ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಮಾತ್ರ ಗೌಳಿ ಜನಾಂದವರು ತಪ್ಪಾಗಿ ಧನಗರ್ ಜಾತಿ ಪ್ರಮಾಣ ಪತ್ರ ಪಡೆಯುತ್ತಿರುವುದರಿಂದ ಶೈಕ್ಷಣಿಕ ಮತ್ತು ಉದ್ಯೋಗದ ಮೀಸಲಾತಿಯಲ್ಲಿ ಅನ್ಯಾಯ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು: (ಮಾಹಿತಿ ನೀಡುವುದು) | ಬಂದಿರುವುದಿಲ್ಲ; ಆದಾಗ್ಯೂ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002ರ ಜಾತಿಪಟ್ಟಿ ಅನ್ವಯ ಪ್ರವರ್ಗ-1ರ ಕ್ರಮ ಸಂಖ್ಯೆ: 86 (ಹೆಚ್) ನಲ್ಲಿ ಗೌಳಿ ಜಾತಿಯನ್ನು ಹಾಗೂ ಪ್ರವರ್ಗ-2ಎ ರಡಿಯ ಕ್ರಮ ಸಂಖ್ಯೆ: 7(ಸಿ) ರಡಿ ಧನಗರ್ ಜಾತಿಯನ್ನು ಸೇರ್ಪಡೆಗೊಳಿಸಲಾಗಿರುತ್ತದೆ. ಎರಡು ಜಾತಿಗಳು ಬೇರೆ ಬೇರೆ ಪ್ರವರ್ಗಗಳಲ್ಲಿ ನಮೂದಾಗಿರುತ್ತದೆ. |
| ಇ) | ಸದರಿ ತಾಲ್ಲೂಕಿನ ಧನಗರ್ ಜನಾಂಗವು ಕೂಡ ಇತರೆ ಜಿಲ್ಲೆಯಲ್ಲಿ ತಮ್ಮ ಜನಾಂಗದವರೇ ಪಡೆಯುವ ಗೌಳಿ ಜಾತಿಯ ಪ್ರಮಾಣ ಪತ್ರ ಪಡೆಯಲು ಇರುವ ಮಾನದಂಡಗಳು ಯಾವುವು: (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮೀಸಲಾತಿ ಇತ್ಯಾದಿ) ಅಧಿನಿಯಮ-1990 ಮತ್ತು ನಿಯಮಗಳು-1992 ರನ್ವಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ವಿತರಿಸುವ ಸಕ್ಷಮ ಪ್ರಾಧಿಕಾರವು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರಾಗಿರುತ್ತಾರೆ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ:ಎಸ್‌ಡಬ್ಲ್ಯೂಡಿ 132 ಎಸ್ ಎಡಿ 97, ದಿನಾಂಕ:08.02.200ರಲ್ಲಿ ವಿವರಿಸಲಾದ ಮಾನದಂಡಗಳನ್ವಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ (ಪ್ರತಿ **ಅನುಬಂಧ-2ರಲ್ಲಿ** ಒದಗಿಸಿದೆ). |

| | | |
|---|---|---|
| ಈ) | ಖಾನಾಪೂರ ತಾಲ್ಲೂಕಿನ ಈ ಜನಾಂಗ ಕೂಡ ಗೌಳಿ ಜಾತಿ ಪ್ರಮಾಣ ಪತ್ರ ನೀಡಲು ಸರ್ಕಾರದ ಮುಂದಿನ ಕ್ರಮಗಳೇನು? | ಸರ್ಕಾರದ ಅಧಿಸೂಚನೆ ಸಂಖ್ಯೆ:ಎಸ್‌ಡಬ್ಲ್ಯೂಡಿ 132 ಎಸ್ಎಡಿ 97, ದಿನಾಂಕ:08.02.2000ರ ಪ್ರಕರಣ 3ಎ ರನ್ವಯ ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ನೀಡುವ ಸಕ್ಷಮ ಪ್ರಾಧಿಕಾರಿಗಳು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರಾಗಿದ್ದು, ಸಕ್ಷಮ ಪ್ರಾಧಿಕಾರಿಗಳು ನಿಯಮಾನುಸಾರ ಸ್ಥಾನಿಕ ವಿಚಾರಣೆ ನಡೆಸಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. |

**ಸಂಖ್ಯೆ:ಹಿಂವಕ 110 ಬಿಸಿಎ 2025**

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ಹೊಸ ಕೆನೆಪದರ ಮತ್ತು ಭಾರತದ ಸಂವಿಧಾನದ ಅನುಚ್ಛೇದ 15(4) ರಂತೆ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಅನುಚ್ಛೇದ 16(4)ರ ಮೇರೆಗೆ ನೇಮಕಾತಿಗಳಲ್ಲಿ ಮೀಸಲಾತಿಗಳು - ಆದೇಶ ಕುರಿತು.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ : ಸಕಇ 150 ಬಿಸಿಎ 94, ದಿ: 17.9.1994
2. ಸರ್ಕಾರಿ ಆದೇಶ ಸಂಖ್ಯೆ : ಸಕಇ 251 ಬಿಸಿಎ 94, ದಿ: 31.01.1995
3. ಸರ್ಕಾರಿ ಆದೇಶ ಸಂಖ್ಯೆ : ಸಕಇ 394 ಬಿಸಿಎ 95, ದಿ: 14.02.1996
4. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ : ಕೆಎಸ್‌ಸಿಬಿಸಿ: ಎಂಎಸ್: ರಿಪೋರ್ಟ್ 2000-01, ದಿನಾಂಕ : 14.12.2000.

ಪ್ರಸ್ತಾವನೆ:

ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 17.9.94ರಲ್ಲಿ ಸರ್ಕಾರವು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ 1994-95ನೇ ಸಾಲಿನಲ್ಲಿ, ವೃತ್ತಿಪರ ಶಿಕ್ಷಣಕ್ಕಾಗಿ ಪ್ರವೇಶ ಪಡೆಯಲು ಈ ಕೆಳಗಿನಂತೆ ಮೀಸಲಾತಿ ನಿಗದಿಪಡಿಸಲಾಗಿತ್ತು.

| | |
|---|---|
| ಪ್ರವರ್ಗ-I | 4% |
| ಪ್ರವರ್ಗ-II (ಎ) | 15% |
| ಪ್ರವರ್ಗ -II (ಬಿ) | 4% |
| ಪ್ರವರ್ಗ -III (ಎ) | 4% |
| ಪ್ರವರ್ಗ -III (ಬಿ) | 5% |
| ಪರಿಶಿಷ್ಟ ಜಾತಿಗಳು | 15% |
| ಪರಿಶಿಷ್ಟ ಪಂಗಡಗಳು | 3% |

2. ಮೇಲಿನ ಆದೇಶದ ಅಡಿಯಲ್ಲಿ ಕೆನೆಪದರ ನೀತಿಯನ್ನು ಜಾರಿಗೆ ತರುತ್ತಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-1ನ್ನು ಹೊರತುಪಡಿಸಿ ಯಾವುದೇ ವ್ಯಕ್ತಿ ಕೆನೆಪದರ ನೀತಿಯನ್ವಯ ನಿಗದಿಪಡಿಸಿದ ನಿಬಂಧನೆಗಳ ವ್ಯಾಪ್ತಿಗೆ ಒಳಪಟ್ಟು ಮೀಸಲಾತಿಗಾಗಿ ಅರ್ಹತೆ ಹೊಂದುತ್ತಾನೆ ಎಂದು ಪ್ರತಿಪಾದಿಸಲಾಗಿದೆ.

3. ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 31.1.95 ರಲ್ಲಿ ವೃತ್ತಿಪರ ಶಿಕ್ಷಣಕ್ಕಾಗಿ ಕ್ರಮಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 17.9.94 ರಲ್ಲಿ ನಿಗದಿಪಡಿಸಿದ ಮೀಸಲಾತಿ ಹಾಗೂ ಕೆನೆಪದರ ನೀತಿಯನ್ನು ಭಾರತ ಸಂವಿಧಾನದ ಅನುಚ್ಛೇದ 16(4) ರಂತೆ ನೇಮಕಾತಿಗಳಿಗೂ ವಿಸ್ತರಿಸಲಾಯಿತು.

4. ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 14.2.96 ರಲ್ಲಿ ದಿನಾಂಕ : 1.1.1995 ರಂದು ವೃತ್ತಿಪರ ಶಿಕ್ಷಣಕ್ಕಾಗಿ ಅಸ್ತಿತ್ವದಲ್ಲಿದ್ದ ಮೀಸಲಾತಿ ಹಾಗೂ ಕೆನೆಪದರ ನೀತಿಯನ್ನು ದಿನಾಂಕ : 1.1.1994 ರಿಂದ ಪೂರ್ವಾನ್ವಯವಾಗಿ ನೇಮಕಾತಿಗಳಿಗೂ ಅನ್ವಯವಾಗುವಂತೆ ಜಾರಿಗೆ ತರಲಾಯಿತು.

5. ಯಾವುದೇ ಸಂದರ್ಭದಲ್ಲಿ ಮೀಸಲಾತಿಯು ಶೇ.50 ಕ್ಕೆ ಮೀರಬಾರದೆಂದು ಭಾರತದ ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ : 438:94 ರಲ್ಲಿ ಮಧ್ಯಂತರ ಆದೇಶ ನೀಡಿದೆ. ಇಂತಹುದೇ ರಿಟ್ ಅರ್ಜಿಗಳು ಸಂಖ್ಯೆ:471:94 ಹಾಗೂ 694:94 ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಇತ್ಯರ್ಥ ಬಾಕಿ ಇವೆ. ಆದುದರಿಂದ ಸರ್ಕಾರಿ ಆದೇಶ ಸಂಖ್ಯೆ: ಸಕಇ 61 ಬಿಸಿಎ 95 ದಿನಾಂಕ : 28.12.95, ದಿನಾಂಕ: 17.9.94 ಹಾಗೂ 13.1.95ರ ಸರ್ಕಾರಿ ಆದೇಶಗಳಲ್ಲಿ ನಿಗದಿಪಡಿಸಿದ ಶೇ.50 ಮೀಸಲಾತಿಯ ಚಲಾವಣೆಯನ್ನು ರಿಟ್ ಅರ್ಜಿ ಸಂಖ್ಯೆ: 438:94, 471:94 ಮತ್ತು 694:94 ರಲ್ಲಿ ಸರ್ವೋಚ್ಛ ನ್ಯಾಯಾಲಯವು ಅಂತಿಮ ತೀರ್ಮಾನ ಕೈಗೊಳ್ಳುವವರೆಗೆ ವಿಸ್ತರಿಸಲಾಗಿದೆ.

6. ಈಗ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಕ್ರಮ ಸಂಖ್ಯೆ (4) ರಲ್ಲಿ ಓದಲಾದ ತನ್ನ ಪತ್ರ ದಿನಾಂಕ:14.12.2000 ರಲ್ಲಿ ವಿಶೇಷ ವರದಿ ಹಾಗೂ 71 ಸಲಹೆಗಳನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಂಪೂರ್ಣ ವರದಿಯನ್ನು ಪರಿಶೀಲಿಸುವುದನ್ನು ಬಾಕಿ ಇಟ್ಟು ಸರ್ಕಾರವು ವಿಶೇಷ ವರದಿಯಲ್ಲಿನ ಕೆನೆಪದರ ನೀತಿ ಹಾಗೂ ಸಲಹೆಗಳಿಗೆ ಸಂಬಂಧಿಸಿದಂತೆ

ಜಾತಿಗಳನ್ನು ಸೇರಿಸುವುದು, ತೆಗೆದುಹಾಕುವುದು ಹಾಗೂ ಕಾಗುಣಿತ ದೋಷಗಳನ್ನು ಸರಿಪಡಿಸುವುದು ಇತ್ಯಾದಿ 71 ಸಲಹೆಗಳನ್ನು ಸವಿವರವಾಗಿ ಪರಿಶೀಲಿಸಿದೆ. ಅಂತೆಯೇ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಸಕಇ 225 ಬಿಸಿಎ 2000, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2002**

ಪೀಠಿಕೆಯಲ್ಲಿಯ ಪ್ರಸ್ತಾವನೆಯನ್ನು ಸವಿವರವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

1. ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿ ಅನುಕ್ರಮವಾಗಿ ಓದಲಾದ ಸರ್ಕಾರಿ ಆದೇಶಗಳು ದಿನಾಂಕ: 17.9.94 ಹಾಗೂ 31.1.95 ರಲ್ಲಿ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಹಾಗೂ ನೇಮಕಾತಿಗಳಿಗಾಗಿ ನಮೂದಿಸಲಾದ ಮೀಸಲಾತಿಯ ಪ್ರಮಾಣವನ್ನು ಮುಂದುವರೆಸಲಾಗಿದೆ.

2. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸುಗಳನ್ನು ಅಳವಡಿಸಿ ಈ ಆದೇಶದ ಅನುಬಂಧ-I ರಲ್ಲಿ ಲಗತ್ತಿಸಲಾದ ಹಿಂದುಳಿದ ವರ್ಗಗಳ ಪರಿಷ್ಕೃತ ಪಟ್ಟಿಯನ್ನು ಈ ತಕ್ಷಣವೇ ಜಾರಿಗೆ ತರಲಾಗಿದೆ.

3. ಈ ಆದೇಶದ ಅನುಬಂಧ-II ರಲ್ಲಿ ಲಗತ್ತಿಸಿದ ಹೊಸ ಸಮಗ್ರ ಕೆನೆಪದರ ನೀತಿಯನ್ನು ಈ ತಕ್ಷಣ ಜಾರಿಗೆ ತರಲಾಗಿದೆ. ಈ ಕೆನೆಪದರ ನೀತಿಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ -I ಕ್ಕೆ ಅನ್ವಯಿಸುವುದಿಲ್ಲ. ಪ್ರವರ್ಗ -II (ಎ), II (ಬಿ), III (ಎ) ಮತ್ತು III (ಬಿ) ಅಡಿಯಲ್ಲಿ ಬರುವ ಅಭ್ಯರ್ಥಿಗಳು ಅನುಬಂಧ-II ರಲ್ಲಿನ ಹೊಸ ಸಮಗ್ರ ಕೆನೆಪದರ ನೀತಿಯಲ್ಲಿ ವಿಧಿಸಿದ ಅನುಬಂಧನೆಗಳಿಗೆ ಅನುಗುಣವಾಗಿ ಮೀಸಲಾತಿಗೆ ಅರ್ಹರಾಗುವರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಿ.ಎಂ. ಆಗಾ**
ಸರ್ಕಾರದ ಉಪ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

**ಸರ್ಕಾರಿ ಆದೇಶ ಸಂಖ್ಯೆ : ಸಕಇ 225 ಬಿಸಿಎ 2000, ಬೆಂಗಳೂರು, ದಿನಾಂಕ : 30ನೇ ಮಾರ್ಚ್ 2002**

**ಅನುಬಂಧ-I**

**ಪ್ರವರ್ಗ-I**

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 1. | ಅಗಮುಡಿ | (g) | ಡವರಿ |
| 2. (a) | ಅಂಬಲಕಾರನ್ | (h) | ಗೋಸಾಯಿ |
| (b) | ಅಂಬಲಕರ್ಮ | (i) | ಗುಸಾಯ್ |
| (c) | ಮುತ್ತರಾಸಿ | (j) | ಹೆಳವ |
| (d) | ಮುತ್ತರಾಚ | (k) | ಹೆಳೊವ |
| 3. | ಬಗ್ಗರು | (l) | ಹೊಲೆವ |
| 4. | ಬವಂದಿ | (m) | ನಂದಿವಾಲ |
| 5. (a) | ಬಾವಾಜಿ | (n) | ಪಿಚಿಗುಂಟ |
| (b) | ಅತಿತ್ | (o) | ಪಿಚ್‌ಗುಂಟಲ |
| (c) | ಬೈರಾಗಿ | (p) | ಪಿಚಿಗುಂಟಲ |
| (d) | ಬವಾನಿ | (q) | ಬಾವ |
| (e) | ಬೈರಾಗಿ | (r) | ಬ್ಯಾರಗಿ |
| (f) | ಡಾರಿಗೋಸಾಯಿ | | |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 6. (a) | ಬೆಸ್ತ | (aj) | ತೊರೆಯ |
| (b) | ಅಂಬಿಗ / ಅಂಬಿ | (ak) | ಪಾಗಿ |
| (c) | ಬಾರ್ಕಿ / ಬಾರಿಕ | 7. (a) | ಭಾಮ್ಟ |
| (d) | ಬೆಸ್ತರ್ | (b) | ಭೋಂಪ್ಟ |
| (e) | ಭೋಯಿ | (c) | ಪರದೇಶಿ - ಭಾಂಪ್ಟ |
| (f) | ರಾಜಬೊಯಿ | (d) | ಟಕರಿ |
| (g) | ಬುಂಡೆ - ಬೆಷ್ತರ್ | (e) | ಭೋಂಪ್ತ್ರ |
| (h) | ದಾಲ್ಜಿ | (f) | ಉಚ್ಚಿಲಿಯನ್ |
| (i) | ದಾವತ್ | 8. | ಭಾಟ್ರಾಜು |
| (j) | ಗಬಿಟ್ | 9. (a) | ಬೋಗಡ್ |
| (k) | ಗಲಾಡಕೊಂಕಣಿ | (b) | ಬೇಗಾಡಿ |
| (l) | ಗಂಗೆಮಕ್ಕಳು | (c) | ಬಗಲಿ |
| (m) | ಗಂಗಾಕುಲ | (d) | ಬೋಗಾಡಿ |
| (n) | ಗಂಗಾಮತ | 10. (a) | ಬುಡಬುಡುಕಿ |
| (o) | ಗಂಗಾಮತಸ್ಥ | (b) | ಬುಡೂಡ್ಕಿ |
| (p) | ಗಂಗಾಪುತ್ರ | (c) | ಚೇಟ್ರಿ |
| (q) | ಗೌರಿಮತ | (d) | ದೇವರಿ |
| (r) | ಬುಂಡೆ-ಬೆಸ್ತ / ಗುಂಡೆ ಬೆಸ್ತ | (e) | ಗರಡಿ |
| (s) | ಹರಕಂತ್ರ | (f) | ಗಿಡ್ಡಿಡ್ಕಿ |
| (t) | ಜಲಗಾರ | (g) | ಜೋಷಿ |
| (u) | ಕಬ್ಬೇರ / ಕಬ್ಬೇರ್ | (h) | ಕಿಚಗಾರ |
| (v) | ಕಬ್ಬಲಿಗ | (i) | ಕಿಲ್ಲಿಕ್ಯಾತ |
| (w) | ಕಬ್ಬಿಲಿ | (j) | ಮೋದಿಗ |
| (x) | ಕಹರ್ | (k) | ಪನ್ಲ |
| (y) | ಖಾರ್ವಿ / ಕೊಂಕಣ ಖಾರ್ವಿ | (l) | ಪನಸ |
| (z) | ಕೋಳಿ | (m) | ಪಿಂಗಳೆ |
| (aa) | ಕೋಳಿ ಮಹದೇವ್ | (n) | ಸಾದಜೋಷಿ |
| (ab) | ಮಡ್ಡರ್ | (o) | ಬುಡ್‌ಬುಡಕಾಲ |
| (ac) | ಮೀನಗಾರ್ | 11. | ಚುಂಚರ್ |
| (ad) | ಮೊಗವೀರ | 12. (a) | ದಾಸರಿ |
| (ae) | ಮೊಗೇರ್ | (b) | ದಾಸರು |
| (af) | ಮುಕ್ಕವಾನ್ | (c) | ಚಕ್ರವಾದ್ಯ - ದಾಸ |
| (ag) | ಪರಿವಾರ | (d) | ದಂಗ್ - ದಾಸರ್ |
| (ah) | ಸಿವಿಯರ್ | (e) | ದೊಂಬಿ - ದಾಸರು |
| (ai) | ಸುಣಗಾರ | | |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 13. (a) | ದೇವದಾಸಿ | 19. (a) | ಹಾವಾಡಿಗ |
| (b) | ಬಸವಿ | (b) | ಹಾವ್‌ಗಾರ್ |
| (c) | ಭಾವಿನ್ | (c) | ಹೌಗಾರ್ |
| (d) | ಬೋಗಮ್ | 20. (a) | ಜಂಗಾಲ |
| (e) | ಗಣಿಕ | (b) | ತೆಲುಗು ಜಂಗಮ |
| (f) | ಕಲಾವಂತ್ | (c) | ಪಾಕಸಾತಿ ಜಂಗಮ |
| (g) | ನಟ್ | 21. (a) | ಜೋಗಿ |
| (h) | ನಟುವ | (b) | ಬ್ರಹ್ಮಕಪಾಲಿ |
| (i) | ಪತ್ರಮೇಳ | (c) | ಜೋಗಾರ್ |
| 14. (a) | ಘಿಸಾಡೆ | (d) | ಜೋಗ್ತಿನ್ |
| (b) | ಘಿಸಾಡಿ | (e) | ಕಪಾಲಿ |
| 15. (a) | ಗೋಣಿಗ ಮನೆ | (f) | ರಾವಳ್ |
| (b) | 24 ಮನೆ ತೆಲುಗು ಶೆಟ್ಟಿ | (g) | ರವಳಿಯ |
| (c) | ಗೋಣಿಚೆಟ್ಟಿ | (h) | ಸಂಜೋಗಿ |
| (d) | ಸಾದುಸೆಟ್ಟಿ | (i) | ಸನ್ಯಾಸಿ |
| (e) | ಸಲಪರು | (j) | ಜೋಗರ್ |
| 16. (a) | ಗುರವ್ | (k) | ನಾಥಪಂಥಿ |
| (b) | ತಾಂಬಲ್ಲ | 22. (a) | ಖಂಜಿರ್ ಭಾಟ್ |
| (c) | ತಾಂಬ್ಲಿ | (b) | ಕಂಜರ್ |
| 17. | ಗುರ್ಖಾ | (c) | ಖಂಜರ್ ಭಾಟ್ |
| 18. (a) | ಹಾಲವಕ್ಕಿ ಒಕ್ಕಲ್ | 23. (a) | ಕಾಶಿಕಪಾಡಿ |
| (b) | ಹಾಲವಕ್ಕಿ ವಕ್ಕಲ್ | (b) | ಕಾಶಿಕಪ್ಡಿ |
| (c) | ಅಟ್ಟೆ ಒಕ್ಕಲು | (c) | ತಿರುಮಲಿ |
| (d) | ಗಾಮ್ ಗವಡ | 24. (a) | ಕಟಬರ್ |
| (e) | ಗಾಮ್ ಒಕ್ಕಲ್ | (b) | ಕಟಬು |
| (f) | ಗ್ರಾಮ ಒಕ್ಕಲು | 25. (a) | ಕಾಟಿಕ್ |
| (g) | ಹಾಲಕ್ಕಿ ಒಕ್ಕಲು | (b) | ಅರೇಯ್ |
| (h) | ಕರೆ ಒಕ್ಕಲು | (c) | ಅರೆ ಕಸಾಯ್ |
| (i) | ಕುಂಚ ವಕ್ಕಲು | (d) | ಅರಿಕಾಟಿಕೇಲು |
| (j) | ಶಿಲ್ವಕ್ಕಲ್ | (e) | ಕಲಾಲ್ ಖಾಟಿಕ್ |
| (k) | ವಕ್ಕಲ್ | (f) | ಕಸಾಬ್ |
| (l) | ಗವಡ | (g) | ಕಸಾಯ್ |
| (m) | ಗಾಮ್ ಗವಡ | (h) | ಮರಟ್ಟಿ |
| (n) | ಗ್ರಾಮ ವಕ್ಕಲು | (i) | ಸೂರ್ಯವಂಶ ಕ್ಷತ್ರಿಯ |
| | | 26. | ಕೊಡಗು ಕಾಪಾಳ |

| ಕ್ರಮ ಸಂಖ್ಯೆ | | ಜಾತಿಯ ಹೆಸರು | ಕ್ರಮ ಸಂಖ್ಯೆ | | ಜಾತಿಯ ಹೆಸರು |
|---|---|---|---|---|---|
| 27. | (a) | ಕೊಲಾರಿ | 42. | | ಪಣಿಕ |
| | (b) | ಕಲಾಯಿರಿ | 43. | (a) | ರಾಯ ರಾವತ್ |
| | (c) | ಕೊಲೇರಿ | | (b) | ರಾವತ್ |
| 28. | (a) | ಕೊಲ್ಲ | 44. | | ರೈನುದಾಸ್ |
| | (b) | ಕೊಲ್ಲಾಲ | 45. | | ಸಾನ್ನಿಯ |
| 29. | (a) | ಕೊಟಾರಿ | 46. | | ಸತಾರ್‌ಕರ್ |
| | (b) | ಕೊಟ್ಟಾರಿ | 47. | | ಸಿದ್ದಿ |
| | (c) | ಕೊಠಾರಿ | 48. | (a) | ಸಿಕ್ಕಲಿಗಾರ |
| 30. | | ಕುಡುಬಿ | | (b) | ಶಿಕಾಲಗಾರ್ |
| 31. | | ಕುಂಬ್ರಿ ಮರಾಠಿ (ಉತ್ತರ ಕನ್ನಡ ಜಿಲ್ಲೆ) | | (c) | ಶಿಕ್ಕಲಿಗರ್ |
| 32. | (a) | ಕುಣಬಿ | 49. | (a) | ಸೋಮವಂಶ ಆರ್ಯ ಕ್ಷತ್ರಿಯ |
| | (b) | ಕುಳವಾಡಿ | | (b) | ಚಿತಾರ |
| | (c) | ಕಣಬಿ | | (c) | ಚಿತ್ರಗಾರ |
| 33. | (a) | ಕುರ್ಮ | | (d) | ದಿಗ್ವಾನ್ |
| | (b) | ಕುರ್ಮಿ | | (e) | ಜೀರಗಾರ |
| 34. | (a) | ಲಾಡರು / ಲಾಡರ / ಲಾಡರ್ | | (f) | ನಾಜಬಂದ್ |
| | (b) | ಲಾಡ್/ ಕ್ಷತ್ರಿಯಲಾಡ್/ಸುಗಂಧಿಲಾಡ್ | | (g) | ನಾಲಬಂದ್ |
| | (c) | ಎಲೆಗಾಲ್ | | (h) | ತಾಂಬಟ್ |
| 35. | | ಮಲಯ | 50. | | ತಕನ್‌ಕರ |
| 36. | (a) | ಮೇದರ | 51. | (a) | ತೇವರ್ |
| | (b) | ಬಟ್ಟರ್ | | (b) | ಕಲರಿ |
| | (c) | ಬರ್ನೆಡ್ | | (c) | ಕಲ್ಲರ್ |
| | (d) | ಗೌರಿಗ | | (d) | ಮರವರ್ |
| | (e) | ಗೌವ್ ರಿಗ | 52. | (a) | ತಿಲಾರಿ |
| | (f) | ಗೌರಿ | | (b) | ತಿರಳಿ |
| | (g) | ಗೌರಿ ಮರಾಠ | 53. | (a) | ಉಪ್ಪಾರ |
| | (h) | ಗೌರಿಗ | | (b) | ಬೆಲ್ದರ್ |
| | (i) | ಮೇದರಿ | | (c) | ಚುನಾರ್ |
| | (j) | ಬುರುಡ್ | | (d) | ಗಾವಾಡಿ |
| 37. | | ಮುದರ್ | | (e) | ಗೌಂದಿ |
| 38. | | ನಾಯಿರಿ / ನ್ಯಾರಿ | | (f) | ಕಲ್ಲು ಕುಟಿಗ ಉಪ್ಪಾರ |
| 39. | | ಒಟರಿ | | (g) | ಲೋನಾರಿ |
| 40. | | ಪಾಮ್ಲೋರ್ | | (h) | ಮೇಲು ಸಕ್ಕರೆಯವರು |
| 41. | (a) | ಪಾಂಗ್ಯುಯಲ್ | | (i) | ಮೇಲು ಸಕ್ಕರೆ |
| | (b) | ಪಾಂಗ್[illegible]ಲ್ | | (j) | ನಾಮದ ಉಪ್ಪಾರ |

1585-K.2

| ಕ್ರ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| (k) | ಪಡಿತ್ / ಪಡ್ತಿ | 64. (a) | ಭಾರ್‌ಡಿ |
| (l) | ಪಡಿತಿ | (b) | ಭಾರ್‌ಗಿ |
| (m) | ಪಾಡಿ | 65. (a) | ಚಾರ |
| (n) | ಸಗರ | (b) | ಚಾರ್ |
| (o) | ಸುಣ್ಣಗಾರ | (c) | ಚ್ಯಾರ್ |
| (p) | ಸುಣ್ಣ ಉಪ್ಪಾರ | 66. (a) | ಚಪ್ಪರ್ ಬಂದ್ (ಮುಸ್ಲಿಂ) |
| (q) | ಉಪ್ಪಳಿಗ | (b) | ಚಪ್ಪರ್ ಬಂದ |
| (r) | ಉಪ್ಪಳಿಗಶೆಟ್ಟಿ | 67. | ಚಿತ್ರಕಥಿ ಜೋಷಿ |
| (s) | ಉಪ್ಪಳಿಯನ್ | 68. | ದರ್ವೇಸು |
| (t) | ಉಪ್ಪೇರ | 69. | ಧೋಲಿ |
| (u) | ಯಕಲಾರ | 70. (a) | ದುರ್ಗಾಮುರ್ಗ |
| (v) | ಎಕ್ಕಲಿ | (b) | ಬುರ್‌ಬುರ್‌ಚ |
| 54. | ವಾಯ್ಡು | 71. (a) | ಮೋದಿಕಾರ |
| 55. | ವಾಸುದೇವ್ | (b) | ಮೋದಿಕರ್ |
| 56. (a) | ವೀರ್ | 72. (a) | ಗೋಂದಲಿ |
| (b) | ವೀರವಸ್ತಿ | (b) | ಘೋಂದಲಿ |
| (c) | ವಿರ್ | (c) | ಗೊಂದಲಿಗ |
| 57. | ವಿರಾಲು | (d) | ಗೋಂಧಲಿ |
| 58. (a) | ಎರ್‌ಕಲ | (e) | ಗೊಂಧಲ್ಲಿ |
| (b) | ಇರಕಲ | 73. | ವಾಗ್ರಿ |
| (c) | ಕೈಕಡಿ | 74. (a) | ಜವೇರಿ |
| (d) | ಕೊರಗಾರ್ | (b) | ಜವರಿ |
| (e) | ಕೊರ್‌ಮಶೆಟ್ಟಿ | 75. | ಜೋಹರಿ |
| (f) | ಕುಂಚಿ | 76. (a) | ಕಾಮಟ್ಟಿ |
| (g) | ಕೊರ್ವಾರಂ | (b) | ಕಮನ್ |
| (h) | ಎರುಕುಲ | 77. (a) | ಕಂಜರಿ |
| 59. (a) | ಬೈಲ್‌ಪತರ್ | (b) | ಕಂಜರ್ |
| (b) | ಬೈಲಪತರ್ | 78. (a) | ಕಲ್ಕಾರಿ, ಕೇಲ್ಕರಿ |
| (c) | ಬಿಲಪತರ್ | (b) | ಖೇಲ್ಕರಿ |
| 60. (a) | ಬಜನಿಯ | 79. (a) | ಕೋಲ್ಹಟಿ |
| (b) | ಬಜೆನಿಯ | (b) | ಕೋಲ್ಹಟಿಗ |
| 61. | ಬಾಲಸಂತೋಷಿ | 80. | ಮಸಣಿಯ ಯೋಗಿ |
| 62. | ಬಾಜಿಗಾರ್ | 81. | ಫುಲ್ ಮಾಲಿ |
| 63. | ಡೇರಿಯ | 82. | ಸಾರಂತ |
| | | 83. (a) | ಸರೋಡ್ಡಿ |
| | | (b) | ಸರೋಡ |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 84. | ವಾಡಿ | (f) | ಗೋರೆ ಅಥವಾ ಗೋರಿಯ |
| 85. | ಬೇಡರು | 88. (a) | ಬೆಂಡರ್ |
| 86. (a) | ಗೊಲ್ಲ | (b) | ಬೆರಾಡ್ |
| (b) | ಯಾದವ್ | (c) | ಬೋಯ |
| (c) | ಅಸ್ಥಾನಗೊಲ್ಲ | (d) | ನಾಯಕಮಕ್ಕಳು |
| (d) | ಯಾದವ | (e) | ನಾಯಕ್‌ವಾಡಿ |
| (e) | ಅಡವಿಗೊಲ್ಲ | (f) | ಪಾಳೇಗಾರ |
| (f) | ಗೋಪಾಲ | (g) | ರಮೋಶಿ |
| (g) | ಗೋಪಾಲಿ | (h) | ತಳವಾರ / ತಳವಾರ್ ಬೋಯ |
| (h) | ಗೌಳಿ | (i) | ವಾಲ್ಮೀಕಿ ಮಕ್ಕಳು |
| (i) | ಗಾವ್ಳಿ | (j) | ವೇದನ್ |
| (j) | ಗಾವಳಿ | (k) | ಪರಿವಾರ ನಾಯಕ |
| (k) | ಗಾವ್ಲಿ | (l) | ಮ್ಯಾಸ ನಾಯಕ |
| (l) | ಅನುಬರು | (m) | ಅರಸ್ ನಾಯಕ |
| (m) | ಅಟನಬರು | (n) | ಬ್ಯಾಡ |
| (n) | ಹಣಬರ್ | (o) | ಹರನ್ ಶಿಕಾರಿ |
| (o) | ಕಾವಡಿ | (p) | ಚಿಗರಿ ಬೇಟಗಾರ್ |
| (p) | ಕೊಲಯನ್ | (q) | ವಾಘ್ರಿ |
| (q) | ಕೊನಾರ್ | (r) | ವಾಗರಿ |
| (r) | ಕೊನ್ನೂರ್ | (s) | ನಿರ್ಶಿಕಾರಿ |
| (s) | ಕೃಷ್ಣ ಗೌಳಿ | (t) | ಬಾಗ್ಡಿ |
| (t) | ಕೃಷ್ಣ ಗೊಲ್ಲ | (u) | ಬೋವರಿ |
| (u) | ಮಣಿಯಾನಿ | (v) | ಘಸಾಟಾರಿ |
| (v) | ಉರಳಿ | (w) | ಹಿರ್ಶಿಕಾರಿ |
| (w) | ತೆಲುಗು ಗೌಡ (ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆ) | 89. | ಡವೇರಿ |
| 87. (a) | ಬಂಜರಿ | 90. (a) | ಗಾರುಡಿ |
| (b) | ಬ್ರಿಂಜಾರಿ | (b) | ಗಾರುಡಿಗ |
| (c) | ವಂಜಾರ | (c) | ಗಾರಡಿಗ |
| (d) | ವಂಜಾರಿ | 91. | ಪರಧೀಸ್ |
| (e) | ಲಂಬೈಡ್ | | |

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 92. (a) | ಗಿರಣಿವಡ್ಡರ್ | 94. (a) | ಪಿಂಜಾರ |
| (b) | ತುಡುಗ್ ವೊಡ್ಡರ್ | (b) | ಪಿಂಜಾರಿ |
| (c) | ಕಲ್ಲು ವಡ್ಡರ್ | (c) | ನದಾಫ್ |
| (d) | ಮಣ್ಣು ವೊಡ್ಡರ್ | (d) | ಲದಾಫ್ |
| (e) | ಭಾಂದಿ ವೊಡ್ಡರ್ | (e) | ದೂದೇಕುಲ |
| 93. (a) | ಭೋಯಿ | (f) | ಮನ್ಸೂರಿ |
| (b) | ಬೊಯಿ | (g) | ಮನ್‌ಸೂರಿ |
| (c) | ಹರಿಕಂತ್ರ | 95. | ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವ ಪರಿಶಿಷ್ಟ ಜಾತಿ |
| (d) | ಖಾರಿಯ | | |
| (e) | ಬೋವಿ | | |

## ಪ್ರವರ್ಗ -II (ಎ)

| ಕ್ರಮ ಸಂಖ್ಯೆ | ಜಾತಿಯ ಹೆಸರು | ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|---|---|
| 1 (a) | ಅಗಸ | 3 (a) | ದೇವಾಡಿಗ |
| (b) | ಚಕಲ | (b) | ದೇವಲಿ |
| (c) | ಧೋಬಿ | (c) | ಮೊಯಿಲಿ |
| (d) | ಮಡಿವಾಳ | (d) | ಪಡಿಯಾರ್ |
| (e) | ಮನ್ನನ್ | (e) | ಸೇರೆಗಾರ |
| (f) | ಪರಿತ್ | (f) | ಸರ್ವೇಗಾರ |
| (g) | ರಾಜಕ | (g) | ಶೇರಗಾರ |
| (h) | ಸಕಲ | (h) | ಸಪಲಿಗ |
| (i) | ವನ್ನನ್ | 4 (a) | ಈಡಿಗ |
| (j) | ವೆಲ್ಲುತೇಡನ್ | (b) | ಬಂಧಾರಿ |
| (k) | ಸಾಕಲವಾಡು | (c) | ಬೆಲ್ಜದ್ |
| 2 | ಬಣ್ಣ (ಕೊಡಗು ಜಿಲ್ಲೆ) | (d) | ಬಿಲ್ಲವ |

| ಕ್ರ.ಸಂ. | ಜಾತಿಯ ಹೆಸರು | ಕ್ರ.ಸಂ. | ಜಾತಿಯ ಹೆಸರು |
|---|---|---|---|
| (e) | ಪೂಜಾರಿ | (i) | ಕುಂಬಾರ್ಡ್ |
| (f) | ದೀವರ | (j) | ಕುಮ್ಮಾರ |
| (g) | ಹಾಲ ಕ್ಷತ್ರಿಯ | (k) | ಕುಸವನ್ |
| (h) | ದೇಶ ಭಂಡಾರಿ | (i) | ಮೂಲ್ಯ |
| (i) | ದೇವರ | (m) | ಸಜ್ಜನ ಕುಂಬಾರ |
| (j) | ದೇವರ ಮಕ್ಕಳು : ದೀವರ ಮಕ್ಕಳು | (n) | ಖುಮಾರ |
| (k) | ಈಡಿಗ | (o) | ಕುಂಭಾರ |
| (l) | ಎಳಿಗ | (p) | ಖುಂಭಾರ |
| (m) | ಎಳವ | (q) | ಕುಲಾಲರ್ |
| (n) | ಗಾಮಲ್ಲ | 7 (a) | ಕುರುಬ |
| (o) | ಗೌಂಡ್ಲ | (b) | ಭಾರವಾಡ್ |
| (p) | ಹಳೇ ಪೈಕರು | (c) | ಧನಗರ್ |
| (q) | ಹಳೇ ಪೈಕ್ | (d) | ಗೊರಯ |
| (r) | ಇಲ್ಲಾವನ್ | (e) | ಹಾಲು ಮತ |
| (s) | ಕಲಾಲ್ | (f) | ಕುರಬ್ |
| (t) | ಮಲಯಾಳಿ ಬಿಲ್ಲವ | (g) | ಕುರುಬನ್ |
| (u) | ನಾಡರ್ | (h) | ಕುರುಂಬ |
| (v) | ನಾಮಧಾರಿ | (i) | ಕುರುಬ್ |
| (w) | ಧಿಯಾನ್ : ಧಿಯ್ಯ | (j) | ಕುರುಂಬನ್ |
| (x) | ಇಳಿಗ | 8 (a) | ನಾಯಿಂದ |
| (y) | ಗೂಂಡ್ಲ | (b) | ಪರಿಯಾಳ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ) |
| (z) | ತಿಯನ್ : ಥಿಯ್ಯಾನ್ | (c) | ಅಂಬಟ್ಟನ್ |
| 5 | ಕೊಡಗು ಹೆಗ್ಗಡೆ (ಕೊಡಗು ಜಿಲ್ಲೆ) | (d) | ಬಜಂತ್ರಿ |
| 6 (a) | ಕುಂಬಾರ | (e) | ಬಂಡಾರಿ |
| (b) | ಚಕ್ರಸಾಲಿ | (f) | ಚೌರಿಯ |
| (c) | ಗುಣಗ | (g) | ಹಡಪದ |
| (d) | ಗಣಗಿ | (h) | ಹಜಾಮ |
| (e) | ಕೊಯವ | (i) | ಕವುಟಿಯನ್ |
| (f) | ಕುಲ | (j) | ಕೆಲಸಿ |
| (g) | ಕುಲಾಲ | (k) | ಕ್ಷೌರಿಕ |
| (h) | ಕುಂಬಾರ್ | (l) | ಕ್ಷೌರದ್ |

| ಕ್ರ.ಸಂ. | ಜಾತಿಯ ಹೆಸರು | ಕ್ರ.ಸಂ. | ಜಾತಿಯ ಹೆಸರು |
|---|---|---|---|
| (m) | ಮಹಾಲೆ | (e) | ಬಡಿಗರ್ |
| (n) | ಮಂಗಳ | (f) | ಬಡಿವಾಡ್ಲ |
| (o) | ಮೇಲಗಾರ | (g) | ಬೈಲ್‌ಪತರ್ |
| (p) | ನಾಡಿಗ | (h) | ಬೈಲು ಅಕ್ಕಸಾಲಿ |
| (q) | ನಾಪಿತ | (i) | ಬೈಲು ಕಮ್ಮಾರ |
| (r) | ನವಲಿಗ್ | (j) | ಬೋಗಾರ |
| (s) | ನಾವಿ | (k) | ಚಪ್ಪೇಗಾರ್ |
| (t) | ನಯನಜ ಕ್ಷತ್ರಿಯ | (l) | ಚಾರೋಡಿ |
| (u) | ನ್ಹಾವಿ | (m) | ಕೊಂಕಣಿ ಆಚಾರ್ |
| (v) | ವಾಜಾಂತ್ರಿ (ಉತ್ತರ ಕನ್ನಡ ಜಿಲ್ಲೆ) | (n) | ದೈವಜ್ಞ ಬ್ರಾಹ್ಮಣ |
| (w) | ಸವಿತ | (o) | ಗೆಜ್ಜೆಗಾರ |
| (x) | ನಯನಜ ಕ್ಷತ್ರಿ | (p) | ಕಂಬಾರ್ |
| (y) | ನಾಡಿಗ್ | (q) | ಕಮ್ಮಾಲನ್ |
| (z) | ಕ್ಷೌರಿಕ್ | (r) | ಕಮ್ಮಾರ |
| (aa) | ಕ್ಷೌರಿಕ | (s) | ಕಂಸಾಳ |
| 9 | ಬೌದ್ಧರು | (t) | ಕಂಸನ್ |
| 10 (a) | ತಿಗಲ | (u) | ಕಂಚಗಾರ್ |
| (b) | ಅಗ್ನಿವಂಶ | (v) | ಕರಚೋರ |
| (c) | ಅಗ್ನಿವನ್ನಿ | (w) | ಕಂಚೋರಿ |
| (d) | ಅಗ್ನಿಕುಲಕ್ಷತ್ರಿಯ | (x) | ಕಂಚುಗಾರ |
| (e) | ಧರ್ಮರಾಜ ಕಾಪು | (y) | ಕಂಸಾರ್ |
| (f) | ಪಳ್ಳಿ | (z) | ಕಸಾರ್ |
| (g) | ಶಂಭುಕುಲ ಕ್ಷತ್ರಿಯ | (aa) | ಲುಹಾರ್ |
| (h) | ತಿಗಳ | (ab) | ಮೆಸ್ತ |
| (i) | ವನ್ನಿಯರ್ | (ac) | ಪಂಚಾಲ್ |
| (j) | ವನ್ನಿಕುಲಕ್ಷತ್ರಿಯ | (ad) | ಪತ್ತರ್ |
| (k) | ತಿಗ್ಲರ್ | (ae) | ಶಿಲ್ಪಿ |
| (l) | ಕುರೋವನ್ | (af) | ಸೋಹಗಾರ್ |
| 11 (a) | ವಿಶ್ವಕರ್ಮ | (ag) | ಸೋನಾರ್ |
| (b) | ಆಚಾರಿ | (ah) | ಸೋನಿ |
| (c) | ಅಕ್ಕಸಾಲಿ | (ai) | ಸುತಾರ್ |
| (d) | ಔಸಾಲ | (aj) | ತಸೆಹಾನ್ |

| ಕ್ರ.ಸಂ. | ಜಾತಿಯ ಹೆಸರು | ಕ್ರ.ಸಂ. | ಜಾತಿಯ ಹೆಸರು |
|---|---|---|---|
| (ak) | ವಿಶ್ವ ಬ್ರಾಹ್ಮಣ | 30 (a) | ಘಾಡಿ |
| (al) | ಥಟ್ಟನ್ | (b) | ಗಾಡಿಗ |
| (am) | ಅಕ್ಸಾಲಿ | (c) | ಗುನಗಿ |
| (an) | ಕಂಸಾಲ್ | 31 (a) | ಘಾಡ್ಸಿ |
| (ao) | ಬಡಗಿ | (b) | ಘಾಡ್ಶಿ |
| 12 (a) | ಅಘೋರಿ | 32 | ಪಿಂಗ್ಳೆ |
| (b) | ಕರ್‌ಕರ್ ಮುಂಡಾ | 33 (a) | ಗೋಸಾವಿ |
| 13 | ಅಜ್ಞಾನಿ | (b) | ಗೋಸಾಯನ್ |
| 14 | ಅಂಬಲವಾಸಿ | 34 (a) | ಗುಜಾರ್ |
| 15 | ಅಂಡೂರನ್ | (b) | ಗುಜಾರ್ |
| 16 (a) | ಅಟರಿ | 35 (a) | ಗುರವ |
| (b) | ಅಥರಿ | (b) | ಗುರೋವ್ |
| 17 | ಬಹುರೂಪಿ | 36 (a) | ಗಬ್ಬಿಟ್ |
| 18 | ಬಕದ್ರ | (b) | ಗಪಿಟ್ |
| 19 (a) | ಬತಾಲ್ | (c) | ಗಾಬಿಟ್ |
| (b) | ಬಟ್ವಲ್ | (d) | ದಾಲಿಜ |
| (c) | ಬಟ್ವರ್ | 37 | ಹಂಡೇವಜೀರ್ |
| 20 | ಬವ್ತಾರ್ | 38 | ಹಂಡೇರ್ವತ್ |
| 21 (a) | ಭಾಟ್ | 39 | ಹೊನ್ನಿಯರ್ |
| (b) | ಬೊಹ್ರೋಟ್ | 40 (a) | ಹೂವಾಡಿಗ |
| 22 | ಬಿನ್ನಪಟ್ವ | (b) | ಹುಗಾರ್ |
| 23 | ಬಿಂಗಿ | (c) | ಹೂಗಾರ್ |
| 24 (a) | ಬಗಡಿ | (d) | ಮಾಲಗಾರ್ |
| (b) | ಬಗಾಡಿ | (e) | ಮಾಲಿ |
| (c) | ಬಗ್ಡಿ | (f) | ಫೂಲ್‌ಮಾಲಿ |
| 25 (a) | ಚಲಿಯನ್ | (g) | ಫುಲ್‌ಮಾಲಿ |
| (b) | ತೆರುವನ್ | (h) | ಫುಲಾರಿ |
| (c) | ಚಲ್ಲಿಯ | (i) | ಫೂಲಾರಿ |
| 26 | ಚಂಬೋಟಿ | (j) | ಜೀರ್ |
| 27 | ಚಂಬುಕುಟ್ಟಿ | 41 | ಕಾಡು ಕೊಂಕಣಿ |
| 28 | ಮೆಸ್ತಾ | 42 | ಕರಿಕುಡುಂಬಿ |
| 29 | ಜಿಂಗಾರ್ | 43 | ಕರುವ |

| ಕ್ರ.ಸಂ. | | ಜಾತಿಯ ಹೆಸರು | ಕ್ರ.ಸಂ. | | ಜಾತಿಯ ಹೆಸರು |
|---|---|---|---|---|---|
| 44 | (a) | ಖಾಟಿಕ್ | 57 | | ಪನಬ |
| | (b) | ಕಟುಕ | 58 | | ಪನ್ನೇಕರ ಕೊಂಕಣಿ |
| | (c) | ಕಟುಗ | 59 | | ಪತ್ರ |
| 45 | | ಬೋಗಾರ್ | 60 | | ಪಿಚಾಟಿ |
| 46 | | ಕಸ್ಬಿನ್ | 61 | | ಪುಲ್ಲವನ್ |
| 47 | (a) | ಕೊಲಾಯಿರಿ | 62 | (a) | ರಾಜಪುರಿ |
| | (b) | ಕೊಲ್‌ಯಿರಿ | | (b) | ರಾಜಪುರ್ |
| 48 | (a) | ಕಣಿಸನ್ | | (c) | ಬಾಲವಾಲಿಕರ್ |
| | (b) | ಬಲ್ಮಾಯ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ) | 63 | | ಸನಿಯಾರ್ |
| | (c) | ಕಣಿಯರ್ | 64 | | ಶಾನನ್ |
| | (d) | ಕಣಿಯರು | 65 | (a) | ಸುದಿರ್ |
| | (e) | ಕಣಿಯ | | (b) | ಸೂದ್ರ |
| | (f) | ಕಣಿಯನ್ (ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ಹೊರತು ಪಡಿಸಿ) | | (c) | ಕುಳವಾಡಿ ಮರಾಟಿ |
| | (g) | ಕಣ್ಯಾನ್ | 66 | | ಸುಟ್ಟಾಲಿ |
| 49 | | ಕುಟುಮ | 67 | | ತಚಾಯಿರಿ |
| 50 | | ಮರ್ತ | 68 | | ತಿಲ್ವಿ |
| 51 | (a) | ಮರಯನ್ | 69 | (a) | ಗವಂಡಿ |
| | (b) | ಮರವನ್ | | (b) | ಗೋವಂಡಿ |
| 52 | | ಮುರ‍್ರಾರಿ | 70 | | ವೆಟ್ಟುವನ್ |
| 53 | (a) | ನಾಡೋರ | 71 | (a) | ಎಕ್ಲರ್ |
| | (b) | ಉಪ್ಪು ನಾಡರ್ : ಉಪ ನಾಡೊರ | | (b) | ಯಕ್ಲರ್ |
| | (c) | ತೊರ್ಕೆ ನಾಡೋರ್ | | (c) | ಈಗಳಿಕ |
| | (d) | ನಾಡೋರ್ | 72 | (a) | ಗಟ್ಟಿ : ಗಟ್ಟಿಯವರು |
| | (e) | ನಾಡವರ್ | | (b) | ಪೊಲೆದವ : ಪೋಲದವರು |
| | (f) | ನಾಡವ | 73 | | ಗುಡಿಗಾರ |
| | (g) | ಉಪ್ಪು ನಾಡೋರ : ಉಪ ನಾಡವರ್ | 74 | (a) | ದರ್ಜಿ |
| 54 | | ನಾಲ್ಕಿ | | (b) | ಭಾವಸಾರ ಕ್ಷತ್ರಿಯ |
| 55 | | ಓಸ್ತನ್ | | (c) | ಚಿಪ್ಪಿ |
| 56 | (a) | ಪಂಡರಂ | | (d) | ಚಿಪ್ಪಿಗ |
| | (b) | ಪಂಡಾರ್ | | (e) | ಸಿಂಪಿ |
| | (c) | ಪಂಡಾರ | | (f) | ಶಿಂಪಿ |

| ಕ್ರ.ಸಂ. | ಜಾತಿಯ ಹೆಸರು | ಕ್ರ.ಸಂ. | ಜಾತಿಯ ಹೆಸರು |
|---|---|---|---|
| (g) | ಸಾಯಿ | (l) | ಸಾಲಿ : ಪಟ್ಟಸಾಲಿ |
| (h) | ಮಿರಾಲ್ | (m) | ಕೈಕೋಳನ್ : ಸೆಂಗುಂದರ್ |
| (i) | ರಙ್ಗಾರಿ | (n) | ನೇಯ್ಕಾರ್ |
| (j) | ರಂಗ್ರೇಜ್ | (o) | ಜಾಡರ್ |
| (k) | ನಿಲಾರಿ | (p) | ಜಾಂಡ್ರ |
| (l) | ನಾಮದೇವ | (q) | ಸ್ವಕುಳಸಾಲಿ : ಸ್ವಕುಳಸಾಳಿ |
| (m) | ನಾಮದೇವ ಸಿಂಪಿ | 77 (a) | ಪಟೇಗಾರ್ |
| (n) | ರಂಗಾರೆ | (b) | ಪಟ್ವೇಕಾರಿ |
| (o) | ನೀಲಗಾರ್ | (c) | ಪಟ್ವೇಗಾರ್ |
| 75 (a) | ದೇವಾಂಗ | (d) | ಸೋಮವಂಶ ಸಹಾಸ್ರಾರ್ಜುನ ಕ್ಷತ್ರಿಯ |
| (b) | ದೇವಾಂಗ್ | 78 (a) | ಗಾಣಿಗ |
| (c) | ಕೋಷ್ಟಿ | (b) | ತೇಲಿ |
| (d) | ಹಟಗಾರ್ : ಹಟಕಾರ್ | (c) | ಗಾಂಡ್ಲ |
| (e) | ಜೇಡ್ | (d) | ವನಿಯನ್ |
| (f) | ವಿಂಕಾರ್ | (e) | ಜ್ಯೋತಿನಗರ : ಜ್ಯೋತಿನಗರ ವೈಶ್ಯ |
| (g) | ಜುಲೋಹ | 79 | ಅಮ್ಮ ಕೊಡವ |
| (h) | ಹಲ್ಬಾರ್ | 80 | ಅನಪ್ಪನ್ |
| (i) | ಹಟಗಾರ್ | 81 | ರಜಪೂತ್ |
| 76 (a) | ನೇಯ್ಗಿ | 82 (a) | ಆಂಡಿ |
| (b) | ಕುರುಹಿನ ಶೆಟ್ಟಿ | (b) | ಆಂಡಿಪಂಡಾರಂ |
| (c) | ಕುರ್ನಿ | 83 | ಬಾಂಧಿ |
| (d) | ಬಿಳಿಮಗ್ಗ | 84 (a) | ಬೋಲಹಳ್ಳಾಲ |
| (e) | ತೊಗಟ : ತೊಗಟರು : ತೊಗಟಿಗ : ತೊಗಟವೀರ : ತೊಗಟಗೇರ : ತೊಗಟವೀರ ಕ್ಷತ್ರಿಯ : ತೊಗಜ ಪುಷ್ಪಾಂಜಲಿ | (b) | ಬಲ್ಲಾಳ |
| (f) | ಸೋಣಿಗ | 85 (a) | ಭಟಿಯಾಲ್ |
| (g) | ಜಂಖಾನ | (b) | ಭಟ್ಟಿಯಾ |
| (h) | ಐರಿ | 86 | ಚಕ್ಕನ್ |
| (i) | ಅವಿರ್ | 87 | ಡೋಗ್ರ |
| (j) | ಸಾಲೆ : ಪಟ್ಟಸಾಲೆ | 88 | ಗುಳ್ಳಿ |
| (k) | ಪದ್ಮಸಾಲೆ : ಪದ್ಮಶಾಲಿ : ಪದ್ಮಸಾಲಿ | 89 | ಹಿಂದೂ ಸಾದರು : ಸಾದರು : ಸಾದುಮತ: ಸಾದಕುಲ : ಸಾದರ್ : ಸಾದುಗೌಡ : ಸಾದುಗೌಡರ್ : ಸಾದರ : ಸಾದರಿ : ಸಾದರಗೌಡ |

| ಕ್ರ.ಸಂ. | ಜಾತಿಯ ಹೆಸರು | ಕ್ರ.ಸಂ. | ಜಾತಿಯ ಹೆಸರು |
|---|---|---|---|
| 90 (a) | ಜೆಟ್ಟಿ : ಜಟ್ಟಿ | (i) | ರಾಮರಾಜ ಕ್ಷತ್ರಿಯ |
| (b) | ಮಲ್ಲಾರು ಮಲ್ಲ ಕ್ಷತ್ರಿಯ | (j) | ಸೇರುಗಾರ (ಉತ್ತರ ಕನ್ನಡ) |
| (c) | ಮುಷ್ಟಿಗ | (k) | ಸರ್ವ್‌ಗಾರ್ (ದಕ್ಷಿಣ ಕನ್ನಡ) |
| 91 (a) | ಕಲಾವಂತಿ | (l) | ಕೋಟೆ ಕ್ಷತ್ರಿಯ |
| (b) | ಭೋಗಂ : ತೆಲುಗ | 94 | ಕ್ಷತ್ರಿಯ : ಕ್ಷತ್ರಿ |
| 92 (a) | ಕನಕನ್ | 95 | ಮಲವ |
| (b) | ಕನಕರ್ | 96 | ಮಲೆಯ |
| (c) | ಕರುಣಿಕ | 97 | ಆರ್‍ಯನ್ |
| 93 (a) | ಕೋಟೆಗಾರ | 98 (a) | ರಾಜು ಕ್ಷತ್ರಿಯ |
| (b) | ಕೋಟೆಯಾರ | (b) | ರಾಜು - ರಾಜು |
| (c) | ಕೊಥಾಟಿ | (c) | ರಾಜುವರ್ : ರಾಜವರ್ : ರಾಚೀವಾರ್ |
| (d) | ಕೊಟ್ಟೇಗಾರ | 99 | ಸೋಮವಂಶ ಕ್ಷತ್ರಿಯ |
| (e) | ಕೊಟ್ಟೇಯಾರ | 100 | ಸ್ಥಾನಿಕ |
| (f) | ಕುಮಾರ ಕ್ಷತ್ರಿಯ | 101 (a) | ತುಳು |
| (g) | ಕುಮಾರ ಪಂಥ್ : ಕೊಮಾರ್ ಪಂತ್ : ಕೋಮಾರ್ ಪೈಕ್ : ಕ್ಷತ್ರಿಯ ಕೋಮಾರ್ ಪಂತ | (b) | ತುಳುವ |
| (h) | ರಾಮ ಕ್ಷತ್ರಿಯ | 102 | ಉಪ್ಪಮ (ಧಾರವಾಡ, ಬೆಳಗಾಂ, ಬಿಜಾಪುರ ಮತ್ತು ಗದಗ್ ಜಿಲ್ಲೆಗಳು) |

## ಪ್ರವರ್ಗ - II (ಬಿ)

| ಕ್ರಮ ಸಂಖ್ಯೆ | ಜಾತಿಯ ಹೆಸರು |
|---|---|
| 1 | ಮುಸ್ಲಿಂ |

## ಪ್ರವರ್ಗ - III (ಎ)

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| 1 | (a) | ಒಕ್ಕಲಿಗ | | (h) | ರೆಡ್ಡಿ ಒಕ್ಕಲಿಗ |
| | (b) | ವಕ್ಕಲಿಗ | | (i) | ಮರಸು ಒಕ್ಕಲಿಗ |
| | (c) | ಸರ್ಪ ಒಕ್ಕಲಿಗ | | (j) | ಗೌಡ (GOUDA) / ಗೌಡ (GOWDA) |
| | (d) | ಹಳ್ಳಿಕಾರ್ ಒಕ್ಕಲಿಗ | | (k) | ಹಳ್ಳಿಕಾರ್ |
| | (e) | ನಾಮಧಾರಿ ಒಕ್ಕಲಿಗ | | (l) | ಕುಂಚಿಟಿಗ |
| | (f) | ಗಂಗಡ್‌ಕಾರ್ ಒಕ್ಕಲಿಗ | | (m) | ಗೌಡ |
| | (g) | ದಾಸ್ ಒಕ್ಕಲಿಗ | | (n) | ಕಾಪು |

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| | (o) | ಹೆಗ್ಗಡೆ | | (d) | ತೆಲಗ ಬಲಿಜ / ತೆಲಗ ಬಣಜಿಗ |
| | (p) | ಕಮ್ಮ | | (e) | ಶೆಟ್ಟಿಬಲಿಜ / ಶೆಟ್ಟಿಬಣಜಿಗ / ಬಣಜಿಗ ಶೆಟ್ಟಿ |
| | (q) | ರಡ್ಡಿ | | (f) | ದಾಸರ ಬಲಿಜ / ದಾಸರ ಬಲಜಿಗ / ದಾಸರ ಬಣಜಿಗ / ದಾಸ ಬಣಜಿಗ |
| | (r) | ಗೌಂಡರ್ | | (g) | ಕಸ್ಬನ್ |
| | (s) | ನಾಮಧಾರಿ ಗೌಡ | | (h) | ಮುನ್ನೂರ / ಮುನ್ನಾರ್ / ಮುನ್ನೂರ್ ಕಾಪು |
| | (t) | ಉಪ್ಪಿನ ಕೊಳಗ / ಉತ್ತಮ ಕೊಳಗ | | (i) | ಬಳೆಗಾರ / ಬಳೆ ಬಣಜಿಗ / ಬಳೆ ಬಲಜಿಗ/ ಬಳೆ ಚೆಟ್ಟಿ / ಬಣಗಾರ |
| 2 | | ಕೊಡಗರು | | (j) | ರೆಡ್ಡಿ (ಬಲಿಜ) |
| 3 | (a) | ಬಲಿಜ | | (k) | ಜನಪ್ಪನ್ |
| | (b) | ಬಲಜಿಗ / ಬಣಜಿಗ / ಗೌಡಬಣಜಿಗ | | (l) | ಉಪ್ಪಾರ (ಬಲಿಜ) |
| | (c) | ನಾಯ್ಡು | | (m) | ತುಲೇರು (ಬಲಿಜ) |

## ಪ್ರವರ್ಗ - III (ಬ)

| | ಕ್ರ.ಸಂ. | ಜಾತಿಯ ಹೆಸರು | | ಕ್ರ.ಸಂ. | ಜಾತಿಯ ಹೆಸರು |
|---|---|---|---|---|---|
| 1 | (a) | ವೀರಶೈವ ಲಿಂಗಾಯತ | | | |
| | (b) | ಲಿಂಗಾಯತ ಉಪ ಜಾತಿಗಳಾದ ಹೆಳವ, ಅಂಬಿಗ, ಭೋಯಿ, ಗಂಗಮತ, ಸುಣಗಾರ, ಅಗಸ, ಮಡಿವಾಳ ಕುಂಬಾರ, ಕುರುಬ, ಬಜಂತ್ರಿ, ಬಂಡಾರಿ, ಹಡಪದ, ಕ್ಷೌರಿಕ, ನವಲಿಗ ನಾವಿ, ಅಕ್ಕಸಾಲಿ, ಬಡಿಗಾರ್, ಕಮ್ಮಾರ, ಕಂಸಾಳ, ಪಂಚಾಳ, ಮೇದರ ಉಪ್ಪಾರ, ಗೌಳಿ | | (b) | ಪರಿವಾರ ಬಂಟ್ |
| 2 | (a) | ಮರಾತ, ಮರಾಠ | 5 | | ಜೈನರು (ದಿಗಂಬರರು) |
| | (b) | ಅರೆ ಕ್ಷತ್ರಿ, ಅರೆ ಮರಾಠ, ಆರ್‍ಯಮರಾಠ | 6 | (a) | ಸಾತಾನಿ |
| | (c) | ಆರ್ಯ, ಆರ್ಯರು | | (b) | ಚಾತ್ತದ ಶ್ರೀವೈಷ್ಣವ / ಚಾತ್ತಾದ ವೈಷ್ಣವ / ಶಾತ್ತಾದ ವೈಷ್ಣವ / ಶಾತ್ತಾದ ಶ್ರೀವೈಷ್ಣವ |
| | (d) | ಕೊಂಕಣ ಮರಾಠ | | (c) | ಕದ್ರಿ ವೈಷ್ಣವ |
| | (e) | ಕ್ಷತ್ರಿಯ ಮರಾಠ | | (d) | ಸಮೆರಾಯ |
| | (f) | ಕುಳವಾಡಿ | | (e) | ಸಾತ್ತದವಲ್ |
| 3 | | ಕ್ರಿಶ್ಚಿಯನ್ | | (f) | ಸಾತ್ತದವನ್ |
| 4 | (a) | ಬಂಟ್ / ಬಂಟ್ | | (g) | ವೈಷ್ಣವ |

ಡಿ.ಎಂ. ಆಗಾ
ಸರ್ಕಾರದ ಉಪ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

**ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30-03-2002**

**ಅನುಬಂಧ - II**

**ಹೊಸ ಸಮಗ್ರ ಕೆನೆಪದರ**

ಸಂವಿಧಾನದ ಪರಿಚ್ಛೇದ 15 (4) ಹಾಗೂ 16 (4)ರ ಅಡಿಯಲ್ಲಿ ಪ್ರವರ್ಗ II A, II B, III A, III B ಇವುಗಳಲ್ಲಿ ಕೆನೆಪದರಕ್ಕೆ ಸಂಬಂಧಿಸಿದಂತೆ ಹಾಲಿ ನೀಡಲಾಗಿರುವ ಮೀಸಲಾತಿಯ ಪ್ರಕಾರ ಈ ಕೆಳಕಂಡ ವ್ಯಕ್ತಿಗಳು ಮೀಸಲಾತಿ ಸ್ಥಾನಗಳಿಗೆ ಅಥವಾ ಹುದ್ದೆಗಳಿಗೆ ಅರ್ಹರಾಗಿರುವುದಿಲ್ಲ.

ಟಿಪ್ಪಣಿ

(1) ನೇರ ನೇಮಕಾತಿಗಳಲ್ಲಿ ಯಾವುದಾದರೂ ಹುದ್ದೆಗಳಿಗೆ ಅರ್ಹತೆಯಾಗಿ, ಕೆಳಗಿನ ಹುದ್ದೆಗಳಲ್ಲಿ ಇನ್ನಾವುದೇ ಹುದ್ದೆಗಳಲ್ಲಿ, ವೃತ್ತಿಯಲ್ಲಿ ಅಥವಾ ಉದ್ಯೋಗದಲ್ಲಿ ನಿರ್ದಿಷ್ಟ ಅವಧಿಯ ಅನುಭವವನ್ನು ನಿಯಮಿಸಿದ ಸಂದರ್ಭಗಳಲ್ಲಿ ಅಂತಹ ಹುದ್ದೆಗಳನ್ನು ತುಂಬುವಾಗ ಕೆನೆಪದರ ನಿಯಮವನ್ನು ಅನ್ವಯಿಸಬಾರದು.

(2) ಈ ನಿಯಮ ಕೆಳಗಿನ ಪಟ್ಟಿಯಲ್ಲಿ ನಮೂದಿಸಿರುವ ವ್ಯಕ್ತಿಗಳ ಮಕ್ಕಳಿಗೆ ಅನ್ವಯಿಸುತ್ತದೆ.

| | |
|---|---|
| 1 | (a) ಭಾರತದ ರಾಷ್ಟ್ರಪತಿಗಳು<br>(b) ಭಾರತದ ಉಪ ರಾಷ್ಟ್ರಪತಿ<br>(c) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಪುಟ ದರ್ಜೆಯ ಹುದ್ದೆಯನ್ನು ಹೊಂದಿರುವ ಎಲ್ಲರೂ<br>(d) ರಾಜ್ಯಸಭೆ ಹಾಗೂ ರಾಜ್ಯಗಳ ವಿಧಾನ ಪರಿಷತ್ತಿನ ಅಧ್ಯಕ್ಷರು<br>(e) ರಾಜ್ಯಪಾಲರುಗಳು<br>(f) ಲೋಕಸಭೆ ಹಾಗೂ ವಿಧಾನ ಸಭೆಗಳ ಸಭಾಪತಿಗಳು<br>(g) ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು<br>(h) ಲೋಕಸೇವಾ ಆಯೋಗದ ಅಧ್ಯಕ್ಷರು<br>(i) ಭಾರತದ ಮಹಾ ನ್ಯಾಯವಾದಿ (Attorney General of India)<br>(j) ಅಡ್ವೋಕೇಟ್ ಜನರಲ್<br>(k) ಮುಖ್ಯ ಚುನಾವಣಾ ಆಯುಕ್ತರು<br>(l) ನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕ, ಭಾರತ ಸರ್ಕಾರ (Comptroller and Auditor general of India)<br>(m) ಕನಿಷ್ಠ 5 ವರ್ಷಗಳ ಅವಧಿಗೆ ಸಂಸತ್ತು ಸದಸ್ಯರಾಗಿರುವವರು - ಅವರ ಅಧಿಕಾರಾವಧಿಯಲ್ಲಿ<br>(n) ಕನಿಷ್ಠ 5 ವರ್ಷಗಳ ಅವಧಿಗೆ ರಾಜ್ಯಗಳ ಶಾಸನ ಸಭೆಯ ಸದಸ್ಯರಾಗಿರುವವರು - ಅವರ ಅಧಿಕಾರಾವಧಿಯಲ್ಲಿ |
| 2 | ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರು, ಸರ್ಕಾರದ ಒಂದನೇ ಅಥವಾ ಎರಡನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ ಅಥವಾ ಖಾಸಗಿ ಕೈಗಾರಿಕೆ : ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೆಯ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ (ವೇತನ ಶ್ರೇಣಿ ರೂ.6000-11200) |
| 3 | ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರ ವಾರ್ಷಿಕ ಒಟ್ಟು ಆದಾಯ (Gross Income) ರೂ.2.00 ಲಕ್ಷ ಮೀರಿದ್ದರೆ |
| 4 | ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ / ಪೋಷಕರ ಸೇರಿದಂತೆ ಕರ್ನಾಟಕ ಭೂ ಸುಧಾರಣಾ ಕಾಯಿದೆ 1961 ರಡಿಯಲ್ಲಿ ನಿಗದಿಪಡಿಸಿರುವ 10 ಯೂನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು ಆದರೆ, ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು. |

ಡಿ.ಎಂ. ಆಗಾ
ಸರ್ಕಾರದ ಉಪ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ

1995ರ ಕರ್ನಾಟಕ ಅಧಿನಿಯಮ ಸಂಖ್ಯೆ 28

*(1995ರ ಅಕ್ಟೋಬರ್ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995.

*(1995ರ ಅಕ್ಟೋಬರ್ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)*

(1997ರ ಅಧಿನಿಯಮ 24ರಲ್ಲಿ ತಿದ್ದುಪಡಿಯಾದಂತೆ)

**ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹೊರತು ನಾಗರಿಕರ ಹಿಂದುಳಿದ ವರ್ಗಗಳಿಗಾಗಿ ಆಯೋಗವನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಅಧಿನಿಯಮ.**

ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹೊರತು ನಾಗರಿಕರ ಹಿಂದುಳಿದ ವರ್ಗಗಳಿಗಾಗಿ ಆಯೋಗವನ್ನು ರಚಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾದುದರಿಂದ;

ಇದು, ಭಾರತ ಗಣರಾಜ್ಯದ ನಲವತ್ತಾರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :-

## ಅಧ್ಯಾಯ I

## ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಹಿಂದುಳಿದ ವರ್ಗಗಳು" ಎಂದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳನ್ನುಳಿದು ಕಾಲಕಾಲಕ್ಕೆ ಪಟ್ಟಿಯಲ್ಲಿ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ನಾಗರಿಕರ ವರ್ಗ ಅಥವಾ ವರ್ಗಗಳು;

(ಬಿ) "ಆಯೋಗ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ;

(ಸಿ) "ಪಟ್ಟಿಗಳು" ಎಂದರೆ ಸಂವಿಧಾನದ 15(4) ಮತ್ತು 16(4)ನೇ ಅನುಚ್ಛೇದಗಳ ಅಡಿಯಲ್ಲಿ ನಾಗರಿಕರ ಹಿಂದುಳಿದ ವರ್ಗಗಳ ಪರವಾಗಿ ಮೀಸಲಾತಿಗೆ ಉಪಬಂಧ ಕಲ್ಪಿಸುವ ಉದ್ದೇಶದಿಂದ ಕಾಲಕಾಲಕ್ಕೆ ರಾಜ್ಯ ಸರ್ಕಾರವು ಸಿದ್ಧಪಡಿಸಿದ ಪಟ್ಟಿಗಳು;

(ಡಿ) "ಸದಸ್ಯ" ಎಂದರೆ ಆಯೋಗದ ಸದಸ್ಯ.

## ಅಧ್ಯಾಯ II

## ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ರಚನೆ

3. **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ರಚನೆ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು "ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ" ಎಂಬ ಹೆಸರಿನಿಂದ ಕರೆಯಲಾಗುವ, ತನ್ನ ಕೇಂದ್ರ ಕಾರ್ಯಸ್ಥಾನವನ್ನು ಬೆಂಗಳೂರಿನಲ್ಲಿ ಹೊಂದಿರುವ ಒಂದು ಆಯೋಗವನ್ನು ರಚಿಸತಕ್ಕದ್ದು.

---

1. ಈ ಅಧಿನಿಯಮವು ಅಧಿಸೂಚನೆ ಮೂಲಕ 01.12.1997 ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯನ್ನು ಈ ಅಧಿನಿಯಮದ ಕೊನೆಯಲ್ಲಿ ನೋಡುವುದು.

(2) ಆಯೋಗವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು,-

(ಎ) ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾಗಿರುವ ಅಥವಾ ನ್ಯಾಯಮೂರ್ತಿಯಾಗಿದ್ದ [1][ಅಥವಾ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕ ಮಾಡಲು ಅರ್ಹನಾಗಿರುವ ಅಥವಾ ಸಮಾಜ ವಿಜ್ಞಾನಿಯಾಗಿರುವ][1] ಒಬ್ಬ ಅಧ್ಯಕ್ಷ;

[2][(ಬಿ) xxx][2];

[3][(ಸಿ) ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ವಿಷಯದ ಬಗ್ಗೆ ವಿಶೇಷ ಜ್ಞಾನವುಳ್ಳ ಐವರು ವ್ಯಕ್ತಿಗಳು, ಇವರಲ್ಲಿ ಒಬ್ಬ ಸಮಾಜ ವಿಜ್ಞಾನಿಯಾಗಿರತಕ್ಕದ್ದು][3] ;

(ಡಿ) ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು ಆಯೋಗದ ಸದಸ್ಯ-ಕಾರ್ಯದರ್ಶಿಯಾಗಿರತಕ್ಕದ್ದು.

4. **ಅಧ್ಯಕ್ಷ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು.-** (1) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು ಅಧ್ಯಕ್ಷ ಮತ್ತು ಪ್ರತಿಯೊಬ್ಬ ಸದಸ್ಯನು ಅವನು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ [2][xxx][2] ಪದಧಾರಣ ಮಾಡತಕ್ಕದ್ದು.

(2) ಅಧ್ಯಕ್ಷ ಅಥವಾ ಸದಸ್ಯನು ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಯಾವುದೇ ಸಮಯದಲ್ಲಿ ಅಧ್ಯಕ್ಷ ಅಥವಾ ಸಂದರ್ಭಾನುಸಾರ ಸದಸ್ಯನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು.

(3) ಒಬ್ಬ ವ್ಯಕ್ತಿಯು ಈ ಮುಂದಿನವುಗಳಿಗೊಳಗಾಗಿದ್ದರೆ ರಾಜ್ಯ ಸರ್ಕಾರವು ಅವನನ್ನು ಅಧ್ಯಕ್ಷನ ಅಥವಾ ಸದಸ್ಯನ ಸ್ಥಾನದಿಂದ ತೆಗೆದುಹಾಕತಕ್ಕದ್ದು:-

(ಎ) ಅವಿಮುಕ್ತ ದಿವಾಳಿಯಾದರೆ,

(ಬಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣಿತನಾಗಿದ್ದು ಕಾರಾವಾಸದ ಶಿಕ್ಷೆಗೆ ಒಳಗಾಗಿದ್ದರೆ,

(ಸಿ) ಅಸ್ವಸ್ಥಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದ್ದರೆ,

(ಡಿ) ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ,

(ಇ) ಆಯೋಗದಿಂದ ಗೈರುಹಾಜರಾಗುವುದಕ್ಕೆ ಅನುಮತಿಯನ್ನು ಪಡೆದುಕೊಳ್ಳದೆ ಆಯೋಗದ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದರೆ, ಅಥವಾ

(ಎಫ್) ಅವನು ಪದದಲ್ಲಿ ಮುಂದುವರಿಯುವುದರಿಂದ ಹಿಂದುಳಿದ ವರ್ಗಗಳು ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ತನ್ನ ಅಧ್ಯಕ್ಷ ಅಥವಾ ಸದಸ್ಯನ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯ ಪಟ್ಟರೆ:

ಪರಂತು, ಈ ಖಂಡದಲ್ಲಿ ಯಾವೊಬ್ಬ ವ್ಯಕ್ತಿಗೆ ಪ್ರಸ್ತಾವದ ವಿರುದ್ಧ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶಕೊಟ್ಟ ಹೊರತು ಅವನನ್ನು ತೆಗೆದುಹಾಕತಕ್ಕದ್ದಲ್ಲ.

(4) (2)ನೇ ಉಪ-ಪ್ರಕರಣದಡಿ ಅಥವಾ ಅನ್ಯಥಾ ರಿಕ್ತತೆಯುಂಟಾದಲ್ಲಿ ಅದನ್ನು ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ತುಂಬತಕ್ಕದ್ದು.

(5) ಅಧ್ಯಕ್ಷ ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

---

1. 1997ರ ಅಧಿನಿಯಮ ಸಂಖ್ಯೆ 24ರ ಮೂಲಕ ದಿನಾಂಕ 29.09.1997ರಿಂದ ಸೇರಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ 24ರ ಮೂಲಕ ದಿನಾಂಕ 29.09.1997ರಿಂದ ಬಿಟ್ಟುಬಿಡಲಾಗಿದೆ.
3. 1997ರ ಅಧಿನಿಯಮ ಸಂಖ್ಯೆ 24ರ ಮೂಲಕ ದಿನಾಂಕ 29.09.1997ರಿಂದ ಪ್ರತಿಯೋಜಿಸಲಾಗಿದೆ.

5. **ಆಯೋಗದ ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳು.-** (1) ರಾಜ್ಯ ಸರ್ಕಾರವು ಆಯೋಗದ ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಅವಶ್ಯಕವಾಗಬಹುದಾದಂಥ ಅಧಿಕಾರಿಗಳು ಮತ್ತು ಉದ್ಯೋಗಿಗಳನ್ನು ಆಯೋಗಕ್ಕೆ ಒದಗಿಸತಕ್ಕದ್ದು.

(2) ಆಯೋಗದ ಉದ್ದೇಶಕ್ಕಾಗಿ ನೇಮಕ ಮಾಡಿಕೊಳ್ಳಲಾದ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು ಅವರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

6. **ವೇತನಗಳು ಮತ್ತು ಭತ್ಯೆಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು.-** ಅಧ್ಯಕ್ಷ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳನ್ನು ಮತ್ತು 5ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳಿಗೆ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ವಿಶ್ರಾಂತಿ ವೇತನಗಳೂ ಸೇರಿದಂತೆ ಆಡಳಿತ ವೆಚ್ಚಗಳನ್ನು 12ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಅನುದಾನಗಳಿಂದ ಸಂದಾಯ ಮಾಡತಕ್ಕದ್ದು.

7. **ರಿಕ್ತತೆ ಇತ್ಯಾದಿಗಳು ಆಯೋಗದ ವ್ಯವಹರಣೆಗಳನ್ನು ಅನೂರ್ಜಿತ ಗೊಳಿಸತಕ್ಕದ್ದಲ್ಲ.-** ಆಯೋಗದ ಯಾವುದೇ ಕೃತ್ಯ ಅಥವಾ ವ್ಯವಹರಣೆಗಳನ್ನು ಆಯೋಗದಲ್ಲಿನ ರಿಕ್ತತೆ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ ಕಾರಣಮಾತ್ರದಿಂದಲೇ ಅನೂರ್ಜಿತಗೊಳಿಸತಕ್ಕದ್ದಲ್ಲ.

8. **ಆಯೋಗದಿಂದ ವಿನಿಯಮಿಸಬೇಕಾದ ಕಾರ್ಯವಿಧಾನ.-** (1) ಆಯೋಗವು ಅವಶ್ಯಕವಾದಾಗಲೆಲ್ಲಾ ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಮತ್ತು ಅಧ್ಯಕ್ಷರು ಸೂಕ್ತವೆಂದು ಭಾವಿಸುವಂಥ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು.

(2) ಆಯೋಗವು ಅದರ ಕಾರ್ಯವಿಧಾನವನ್ನು ವಿನಿಯಮಿಸತಕ್ಕದ್ದು.

(3) ಆಯೋಗದ ಎಲ್ಲ ಆದೇಶಗಳು ಮತ್ತು ತೀರ್ಮಾನಗಳನ್ನು ಸದಸ್ಯ-ಕಾರ್ಯದರ್ಶಿ ಅಥವಾ ಈ ಪರವಾಗಿ ಸದಸ್ಯ-ಕಾರ್ಯದರ್ಶಿಯು ಸೂಕ್ತವಾಗಿ ಪ್ರಾಧೀಕರಿಸಿದ ಆಯೋಗದ ಇತರ ಯಾರೇ ಅಧಿಕಾರಿಯು ಅಧಿಕೃತಗೊಳಿಸತಕ್ಕದ್ದು.

## ಅಧ್ಯಾಯ III

## ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು

9. **ಆಯೋಗದ ಪ್ರಕಾರ್ಯಗಳು.-** (1) ಆಯೋಗದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ:-

(i) ನಾಗರಿಕರ ಯಾವುದೇ ವರ್ಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಬಂದ ಕೋರಿಕೆಗಳನ್ನು ಪರಿಶೀಲಿಸುವುದು ಮತ್ತು ಯಾವುದೇ ಹಿಂದುಳಿದ ವರ್ಗವನ್ನು ಅಂಥ ಪಟ್ಟಿಯಲ್ಲಿ ಹೆಚ್ಚಾಗಿ ಸೇರಿಸಲಾಗಿದೆ ಎಂದು ಅಥವಾ ಸೇರಿಸಲಾಗಿಲ್ಲವೆಂದು ಬಂದ ದೂರುಗಳ ವಿಚಾರಣೆ ಮಾಡುವುದು ಮತ್ತು ಸರ್ಕಾರಕ್ಕೆ ಅದು ಸಮುಚಿತವೆಂದು ಭಾವಿಸುವಂಥ ಸಲಹೆಯನ್ನು ನೀಡುವುದು;

(ii) ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಮತ್ತು ಸಮಸ್ಯೆಗಳ ಬಗ್ಗೆ ಸರ್ವೆ ಮಾಡುವುದು.

(iii) ಹಿಂದುಳಿದ ವರ್ಗಗಳಿಗಾಗಿ ಇರುವ ಅನೇಕ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.

(2) ಆಯೋಗವು ನೀಡುವ ಸಲಹೆಗಳಿಗೆ ಸರ್ಕಾರವು ಸಾಮಾನ್ಯವಾಗಿ ಬದ್ಧವಾಗಿರತಕ್ಕದ್ದು.

10. **ಆಯೋಗದ ಅಧಿಕಾರಗಳು.-** ಆಯೋಗವು 9ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಒಂದು ದಾವೆಯನ್ನು ವಿಚಾರಣೆ ಮಾಡುವಾಗ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ, ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದರೆ:-

(ಎ) ರಾಜ್ಯದ ಯಾವುದೇ ಭಾಗದಿಂದ ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ಪರೀಕ್ಷಿಸುವುದು;

(ಬಿ) ಯಾವುವೇ ದಾಖಲೆಗಳನ್ನು ಶೋಧಿಸುವುದನ್ನು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್‌ಗಳ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ನೀಡುವಂತೆ ಅಗತ್ಯಪಡಿಸುವುದು;

(ಇ) ಸಾಕ್ಷಿಗಳ ಮತ್ತು ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು; ಮತ್ತು,

(ಎಫ್) ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

**11. ರಾಜ್ಯ ಸರ್ಕಾರದಿಂದ ಪಟ್ಟಿಗಳ ನಿಯತಕಾಲಿಕ ಪರಿಷ್ಕರಣೆ.-** (1) ರಾಜ್ಯ ಸರ್ಕಾರವು ಯಾವುದೇ ಸಮಯದಲ್ಲಿ ಮತ್ತು ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಹತ್ತು ವರ್ಷಗಳ ಅವಧಿಯು ಮುಕ್ತಾಯವಾದಾಗ ಮತ್ತು ಅದರ ನಂತರ ಬರುವ ಪ್ರತಿ ಹತ್ತು ವರ್ಷಗಳ ಅವಧಿ ಮುಕ್ತಾಯವಾಗುವಾಗ ಹಿಂದುಳಿದ ವರ್ಣ ಉಳಿಯದೇ ಹೋಗಿರುವ ವರ್ಗಗಳನ್ನು ತೆಗೆದುಹಾಕುವ ಅಥವಾ ಹೊಸ ಹಿಂದುಳಿದ ವರ್ಗಗಳನ್ನು ಅಂಥ ಪಟ್ಟಿಯಲ್ಲಿ ಸೇರಿಸುವುದನ್ನು ಗಮನದಲ್ಲಿರಿಸಿಕೊಂಡು ಪಟ್ಟಿಗಳನ್ನು ಪುನರೀಕ್ಷಿಸತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಪುನರೀಕ್ಷಣೆಯನ್ನು ಕೈಗೊಳ್ಳುವಾಗ ಆಯೋಗದ ಸಲಹೆಯನ್ನು ಪಡೆಯತಕ್ಕದ್ದು.

## ಅಧ್ಯಾಯ IV

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**12. ರಾಜ್ಯ ಸರ್ಕಾರದಿಂದ ಅನುದಾನಗಳು.-** ಈ ಅಧಿನಿಯಮದ ಉದ್ದೇಶಗಳಿಗಾಗಿ ಬಳಸಲು ರಾಜ್ಯ ಸರ್ಕಾರವು ಯುಕ್ತವೆಂದು ಭಾವಿಸುವಂಥ ಹಣದ ಮೊತ್ತವನ್ನು ಅನುದಾನಗಳ ಮೂಲಕ ಆಯೋಗಕ್ಕೆ ಈ ಪರವಾಗಿ ಕಾನೂನಿನ ಮೂಲಕ ರಾಜ್ಯ ವಿಧಾನಮಂಡಲವು ಧನವಿನಿಯೋಗ ಮಾಡಿದ ನಂತರ ನೀಡತಕ್ಕದ್ದು.

(2) ಆಯೋಗವು ಅಂಥ ಮೊತ್ತವನ್ನು ಈ ಅಧಿನಿಯಮದ ಅಡಿಯಲ್ಲಿನ ಪ್ರಕಾರ್ಯಗಳನ್ನು ನೆರವೇರಿಸಲು ತಾನು ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಖರ್ಚು ಮಾಡಬಹುದು ಮತ್ತು ಅಂಥ ಮೊತ್ತಗಳನ್ನು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸುವ ಅನುದಾನಗಳಿಂದ ಸಂದಾಯ ಮಾಡಬಹುದಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**13. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.-** (1) ಆಯೋಗದ ಆದಾಯ ಮತ್ತು ವೆಚ್ಚಗಳನ್ನು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಆಯೋಗ ನಿಯಮಿಸಬಹುದಾದಂತಹ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಗಳನ್ನು ತಯಾರಿಸತಕ್ಕದ್ದು.

(3) ಆಯೋಗ ಲೆಕ್ಕಪತ್ರಗಳನ್ನು ವಾರ್ಷಿಕವಾಗಿ ರಾಜ್ಯ ಸರ್ಕಾರವು ನೇಮಕ ಮಾಡಬಹುದಾದಂಥ ಲೆಕ್ಕ ಪರಿಶೋಧಕನಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(4) ಲೆಕ್ಕ ಪರಿಶೋಧಕನಿಗೆ ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ಆಯೋಗದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ಪಡೆಯಲು ಅವಕಾಶವಿರತಕ್ಕದ್ದು.

(5) ನಿಯಮಿಸಬಹುದಾದಂತೆ ಲೆಕ್ಕ ಪರಿಶೋಧನೆಯ ಅಂಥ ವೆಚ್ಚಗಳನ್ನು ಆಯೋಗವು ತನ್ನ ಅನುದಾನದಿಂದ ಸಂದಾಯ ಮಾಡತಕ್ಕದ್ದು.

(6) ಲೆಕ್ಕ ಪರಿಶೋಧನಾ ವರದಿಯನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಆಯೋಗವು ಲೆಕ್ಕಪತ್ರಗಳ ವಾರ್ಷಿಕ ವಿವರವನ್ನು ಲೆಕ್ಕ ಪರಿಶೋಧಕನ ವರದಿಯ ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರವನ್ನು ಪ್ರಕಟಿಸುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕ ಪರಿಶೋಧಕನ ವರದಿಯನ್ನು ಅವಗಾಹಿಸಿದ ನಂತರ ಅದು ಉಚಿತವೆಂದು ಭಾವಿಸುವಂಥ ನಿರ್ದೇಶನಗಳನ್ನು ಆಯೋಗಕ್ಕೆ ನೀಡಬಹುದು ಮತ್ತು ಆಯೋಗವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**14. ವಾರ್ಷಿಕ ವರದಿ.-** ಪ್ರತಿ ಹಣಕಾಸು ವರ್ಷಕ್ಕಾಗಿ ಆಯೋಗವು ಹಿಂದಿನ ವರ್ಷದಲ್ಲಿ ಅದರ ಕಾರ್ಯಚಟುವಟಿಕೆಯ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವ ಅದರ ವಾರ್ಷಿಕ ವರದಿಯನ್ನು ನಿಯಮಿಸಬಹುದಾದಂತೆ ಅಂಥ ನಮೂನೆ ಮತ್ತು ಅಂಥ ಸಮಯದಲ್ಲಿ ತಯಾರಿಸತಕ್ಕದ್ದು ಮತ್ತು ಅದು ಒಂದು ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**15. ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಯನ್ನು ರಾಜ್ಯ ವಿಧಾನಮಂಡಲದಲ್ಲಿ ಮಂಡಿಸತಕ್ಕದ್ದು.-** ರಾಜ್ಯ ಸರ್ಕಾರವು ಆಯೋಗವು ವಾರ್ಷಿಕ ವರದಿಯಲ್ಲಿ ನೀಡಿರುವ ಶಿಫಾರಸ್ಸುಗಳು, ಅವು ರಾಜ್ಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಅವುಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಮತ್ತು ಅಂಥ ಶಿಫಾರಸ್ಸುಗಳು ಯಾವುವಾದರೂ ಇದ್ದಲ್ಲಿ, ಅವುಗಳನ್ನು ಒಪ್ಪಿಕೊಳ್ಳದಿರುವುದಕ್ಕೆ ಕಾರಣಗಳ ಜ್ಞಾಪನದೊಂದಿಗೆ ವರದಿಗಳನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗನೆ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು, ಆಯೋಗವು ಅದರ ವಿವೇಚನಾನುಸಾರವಾಗಿ ಸಾರ್ವಜನಿಕ ಪ್ರಾಮುಖ್ಯತೆಯನ್ನು ಹೊಂದಿರುವ ಯಾವುದೇ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸಬಹುದು.

## ಅಧ್ಯಾಯ-V

### ಸಂಕೀರ್ಣ

**16. ಆಯೋಗದ ಅಧ್ಯಕ್ಷ, ಸದಸ್ಯರು ಮತ್ತು ನೌಕರರು ಲೋಕ ನೌಕರರಾಗಿರತಕ್ಕದ್ದು.-** (1) ಆಯೋಗದ ಅಧ್ಯಕ್ಷ, ಸದಸ್ಯರು ಮತ್ತು ನೌಕರರು ಲೋಕ ನೌಕರರನ್ನು ಭಾರತ ದಂಡಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂಬುದಾಗಿ ಭಾವಿಸತಕ್ಕದ್ದು.

**17. ನಿಯಮಗಳನ್ನು ರಚಿಸಲು ಅಧಿಕಾರ.-** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ತಿಳಿಸಿದ ಅಧಿಕಾರಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 4ನೇ ಪ್ರಕರಣದ (5)ನೇ ಉಪ-ಪ್ರಕರಣದ ಅಡಿಯಲ್ಲಿ ಅಧ್ಯಕ್ಷ ಮತ್ತು ಸದಸ್ಯರಿಗೆ ಮತ್ತು 5ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅಧಿಕಾರಿಗಳಿಗೆ ಮತ್ತು ಇತರ ನೌಕರರಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 13ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ತಯಾರಿಸತಕ್ಕ ಲೆಕ್ಕಪತ್ರಗಳ ವಾರ್ಷಿಕ ವಿವರದ ನಮೂನೆ;

(ಸಿ) 14ನೇ ಪ್ರಕರಣದ ಅಡಿಯಲ್ಲಿ ತಯಾರಿಸತಕ್ಕಂಥ ವಾರ್ಷಿಕ ವರದಿಯ ನಮೂನೆ ಮತ್ತು ಸಮಯ;

(ಡಿ) ನಿಯಮಿಸುವುದು ಅಗತ್ಯವಾದಂಥ ಅಥವಾ ನಿಯಮಿಸಬಹುದಾದಂಥ ಯಾವುವೇ ಇತರ ವಿಷಯಗಳು.

(3) ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹೀಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಮಾಡಬಾರದೆಂದು ತೀರ್ಮಾನಿಸಿದರೆ ತದನಂತರ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗದಂತೆ ಇರತಕ್ಕದ್ದು.

**18. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** (1) ಈ ಅಧಿನಿಯಮದ ಉಪಬಂಧ ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಅಗತ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವ ಉಪಬಂಧಗಳನ್ನು ಮಾಡಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಮಂಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

* * * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 5ನೇ ಡಿಸೆಂಬರ್ 1997. (ಸಂಖ್ಯೆ : ಸಕಇ 164 ಬಿಸಿಎ 97)**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995ರ (1995ರ ಕರ್ನಾಟಕ ಅಧಿನಿಯಮ ಸಂಖ್ಯೆ 28)ರ ಪ್ರಕರಣ 1ರ (2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, 1997ರ ಡಿಸೆಂಬರ್ ಮೊದಲನೇ ದಿನಾಂಕದಂದು ಸದರಿ ಅಧಿನಿಯಮವು ಜಾರಿಯಲ್ಲಿ ಬರತಕ್ಕದ್ದು ಎಂದು ಈ ಮೂಲಕ ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಪಿ. ಪುಷ್ಪರಾಣಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ 4-2ಸಿ(ii) ದಿನಾಂಕ 5-12-1997ರಲ್ಲಿ ನಂ. 1262 ಆಗಿಪ್ರಕಟಿತ.)

* * * *

**ಕರ್ನಾಟಕ ಸರ್ಕಾರ**

ಸಂ. ಎಸ್‌ಡಬ್ಲ್ಯೂಡಿ 147 ಬಿಸಿಎ 96

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 3.6.1999

**ಅಧಿಸೂಚನೆ**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ 1995ರ (1995ರ ಕರ್ನಾಟಕ ಅಧಿನಿಯಮ ಸಂ. 28) 17ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

1. **ಹೆಸರು ಮತ್ತು ಪ್ರಾರಂಭ.-**
   (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಿಯಮಗಳು, 1999 ಎಂದು ಕರೆಯತಕ್ಕದ್ದು.
   (2) ಇವು ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:-
   (1) 'ಅಧಿನಿಯಮ' ಎಂದರೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ, 1995 (1995ರ ಕರ್ನಾಟಕ ಅಧಿನಿಯಮ 28).

(2) 'ಅಧ್ಯಕ್ಷ' ಎಂದರೆ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಸರ್ಕಾರವು ನಾಮ ನಿರ್ದೇಶಿಸಿದ ಆಯೋಗದ ಅಧ್ಯಕ್ಷ :

(3) 'ಸರ್ಕಾರ' ಎಂದರೆ ಕರ್ನಾಟಕ ಸರ್ಕಾರ :

**3. ಆಯೋಗದ ಅಧ್ಯಕ್ಷ, ಸದಸ್ಯರು ಹಾಗೂ ಸಿಬ್ಬಂದಿ ವರ್ಗದ ಸಂಬಳ ಹಾಗೂ ಭತ್ಯೆಗಳು.-**

(1) ಅಧ್ಯಕ್ಷನು ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಾಧೀಶನಿಗೆ ಅನ್ವಯವಾಗುವ ಹಾಗೂ ಕಾಲಕಾಲಕ್ಕೆ ಜಾರಿಗೆ ಬರುವ, ಪ್ರಯಾಣಭತ್ಯೆ ಹಾಗೂ ದಿನಭತ್ಯೆಯನ್ನೊಳಗೊಂಡ ಸಂಬಳ ಹಾಗೂ ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ಸದಸ್ಯ ಕಾರ್ಯದರ್ಶಿಯಲ್ಲದ ಇತರ ಸದಸ್ಯರು, ಕಾಲಕಾಲಕ್ಕೆ ಜಾರಿಯಲ್ಲಿರುವ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರುಗಳಿಗೆ ಅನ್ವಯವಾಗುವ ಸಂಬಳ, ಭತ್ಯೆಗಳು, ಪ್ರಯಾಣ ಭತ್ಯೆಗಳು ಹಾಗೂ ದಿನಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದು.

(3) ಆಯೋಗದ ಹುದ್ದೆಗಳನ್ನು ಯಾವುದೇ ರಾಜ್ಯ ಸಿವಿಲ್ ಸೇವೆಗಳು/ವಿಶ್ವವಿದ್ಯಾನಿಲಯಗಳು/ಸ್ಥಳೀಯ ಪ್ರಾಧಿಕಾರಗಳು/ ಸಾರ್ವಜನಿಕ ವಲಯದ ಉದ್ಯಮಗಳು / ಶಾಸನಬದ್ಧ ಮಂಡಳಿಗಳು/ನಿಗಮಗಳಲ್ಲಿ ತತ್ಸಮಾನ ವೇತನ ಶ್ರೇಣಿಗಳು ಹಾಗೂ ದರ್ಜೆಗಳನ್ನು ಹೊಂದಿರುವ ಅಧಿಕಾರಿಗಳು/ನೌಕರರನ್ನು ಪ್ರತಿನಿಯೋಜಿಸುವ ಮೂಲಕ ಅಥವಾ ಮೇಲಿನ ಯಾವುದೇ ಸೇವೆಗಳಿಂದ ವಯೋನಿವೃತ್ತಿಯ ಮೂಲಕ ನಿವೃತ್ತರಾದ ವ್ಯಕ್ತಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಮೂಲಕ ಭರ್ತಿ ಮಾಡತಕ್ಕದ್ದು.

(4) ಪ್ರತಿನಿಯೋಜನೆ ಅಥವಾ ಗುತ್ತಿಗೆ ಆಧಾರಿತ ನೇಮಕಾತಿಗಳ ಮುಖಾಂತರ ಮಾಡಲಾದ ನೇಮಕಾತಿಗಳು, ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಉಪಬಂಧಗಳು ಹಾಗೂ ಕಾಲಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಸರ್ಕಾರಿ ಆದೇಶಗಳ ಪ್ರಕಾರ ಇರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ/-

ಸರ್ಕಾರದ ಅಧೀನ ಕಾರ್ಯದರ್ಶಿ

ಸಮಾಜ ಕಲ್ಯಾಣ ಇಲಾಖೆ

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು-58

I

1

ಅನುಬಂಧ 'ಇ'

ಸಂಖ್ಯೆ : ಎಸ್‌ಡಬ್ಲ್ಯೂಡಿ:132ಎಸ್‌ಎಡಿ:97

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, 2ನೇ ಮಹಡಿ,
ಬೆಂಗಳೂರು

ದಿನಾಂಕ : 08.02.2000.

ಅಧಿಸೂಚನೆ

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990ರ (1991ರ ಕರ್ನಾಟಕ ಅಧಿನಿಯಮ 7) 13ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ನಿಯಮಗಳು, 1992ನ್ನು ಮತ್ತಷ್ಟು ತಿದ್ದುಪಡಿ ಮಾಡಿ ಈ ಮುಂದಿನ ನಿಯಮಗಳನ್ನು ರಚಿಸಿದೆ, ಎಂದರೆ :-

1. ಹೆಸರು ಮತ್ತು ಪ್ರಾರಂಭ - (1) ಈ ನಿಯಮಗಳನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ನಿಯಮಗಳು, 2000 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳು ಪ್ರಕಟವಾದ ದಿನದಿಂದ ಜಾರಿಗೆ ಬರತಕ್ಕದ್ದು.

2. 2ನೇ ನಿಯಮದ ತಿದ್ದುಪಡಿ - ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ನಿಯಮಗಳು, 1992ರ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ), 2ನೇ ನಿಯಮದ (1)ನೇ ಖಂಡದ (4)ನೇ ಉಪ ಖಂಡದಲ್ಲಿ ''ನಿಯಮ (4)ರನ್ವಯ ರಚಿತವಾದ ಸಮಿತಿ'' ಎಂಬ ಪದಗಳು ಮತ್ತು ಅಂಕಿ ಮತ್ತು ಆವರಣಗಳಿಗೆ ''ನಿಯಮ (4)ರ ಅನುಸಾರವಾಗಿ ರಚಿತವಾದ ಒಂದು ಸಮಿತಿ ಮತ್ತು ಒಂದು ಹೆಚ್ಚುವರಿ ಸಮಿತಿ'' ಎಂಬ ಪದಗಳು, ಅಂಕಿ ಮತ್ತು ಆವರಣಗಳನ್ನು ಹಾಗೂ (5)ನೇ ಉಪ ಖಂಡದಲ್ಲಿ ''ನಿಯಮ (5)ರನ್ವಯ ರಚಿಸಲಾದ ಸಮಿತಿ'' ಎಂಬ ಪದಗಳು ಮತ್ತು ಅಂಕಿ ಮತ್ತು ಆವರಣಗಳಿಗೆ ''ನಿಯಮ (5)ರ ಅನುಸಾರ ರಚಿಸಲಾದ ಒಂದು ಸಮಿತಿ ಮತ್ತು ಒಂದು ಹೆಚ್ಚುವರಿ ಸಮಿತಿ'' ಎಂಬ ಪದಗಳು, ಅಂಕಿ ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

-------

3. 3ಎ, 3ಬಿ ಮತ್ತು 3ಸಿ ಹೊಸ ನಿಯಮಗಳ ಸೇರ್ಪಡೆ - ಸದರಿ ನಿಯಮಗಳ 3ನೇ ನಿಯಮದ ತರುವಾಯ ಈ ಮುಂದಿನ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ :-

"3ಎ. ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳ ನೀಡಿಕೆ - (1) 4ಎ ಪ್ರಕರಣದ ಅಡಿಯಲ್ಲಿ ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳಿಗಾಗಿನ ಪ್ರತಿಯೊಂದು ಅರ್ಜಿಯು, ಕ್ಲೇಮಿನ ಸಮರ್ಥನೆಗಾಗಿ ಅಂಥ ದಸ್ತಾವೇಜುಗಳು ಮತ್ತು ಅವಶ್ಯಕವಾದ ಇತರೆ ವಿಷಯಗಳೊಡನೆ, ಸೂಕ್ತವಾಗಬಹುದಾದಂತೆ ಎ, ಬಿ ಅಥವಾ ಸಿ ನಮೂನೆಗಳಲ್ಲಿ ಇರತಕ್ಕದ್ದು.

(2) ಅರ್ಜಿಯನ್ನು ಸ್ವೀಕರಿಸಿದ ನಂತರ, ತಹಶಿಲ್ದಾರನು, ಅರ್ಜಿದಾರನು ಒದಗಿಸಿರುವ ಮಾಹಿತಿಯನ್ನು, ದಸ್ತಾವೇಜುಗಳನ್ನು ಮತ್ತು ಅಂಥ ಆವಶ್ಯಕವಾದ ಇತರ ವಿಷಯಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ಪರಿಶೀಲನೆಯಿಂದ ಅರ್ಜಿದಾರನು ಒದಗಿಸಿರುವ ಮಾಹಿತಿ, ದಸ್ತಾವೇಜುಗಳು ಮತ್ತು ಸಾಕ್ಷ್ಯಗಳು ಸರಿಯಾಗಿವೆಯೆಂದು ಮನವರಿಕೆಯಾದ ನಂತರ, ಆತನು ಜಾತಿ ಪ್ರಮಾಣ ಪತ್ರವನ್ನು ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಸೂಕ್ತವಾಗಬಹುದಾದಂತೆ, ಡಿ, ಇ ಅಥವಾ ಎಫ್ ನಮೂನೆಗಳಲ್ಲಿ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳ ಒಳಗಾಗಿ ನೀಡತಕ್ಕದ್ದು.

(3) ಅರ್ಜಿದಾರನು ಒದಗಿಸಿರುವ ಮಾಹಿತಿ, ದಸ್ತಾವೇಜುಗಳು ಅಥವಾ ಇತರ ದಾಖಲೆಗಳ ಸರಿತನದ ಬಗ್ಗೆ ತಹಶಿಲ್ದಾರನಿಗೆ ಮನವರಿಕೆಯಾಗದಿದ್ದಲ್ಲಿ, ಆತನು ಈ ಮುಂದಿನಂತೆ ವಿಚಾರಣೆಯನ್ನು ನಡೆಸಲು ಮುಂದುವರೆಯತಕ್ಕದ್ದು -

(ಎ) ತಹಶಿಲ್ದಾರನು ವಿಚಾರಣೆಯ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ನಿಗದಿ ಮಾಡಿದ ದಿನಾಂಕದಂದು ಎಲ್ಲ ದಸ್ತಾವೇಜುಗಳು ಮತ್ತು ಅರ್ಜಿದಾರನು ಹಾಜರುಪಡಿಸಲು ಬಯಸುವ ಇತರ ಎಲ್ಲಾ ವಿಷಯಗಳೊಂದಿಗೆ ಹಾಜರಾಗುವಂತೆ ತಿಳಿಸಿ ಅವನಿಗೆ ನೋಟೀಸನ್ನು ನೀಡತಕ್ಕದ್ದು.

(ಬಿ) ವಿಚಾರಣೆಯ ಸಮಯದಲ್ಲಿ ಆತನು ಶಾಲಾ ದಾಖಲೆಗಳನ್ನು, ಜನನ ನೋಂದಣಿ ಪ್ರಮಾಣ ಪತ್ರ, ಯಾವುದಾದರೂ ಇದ್ದರೆ, ಅದನ್ನು ಮತ್ತು ಸಂಬಂಧಪಟ್ಟ ಅಂಥ ಇತರ ದಾಖಲೆಗಳನ್ನು ಪರೀಕ್ಷಿಸತಕ್ಕದ್ದು, ಅರ್ಜಿದಾರನು ಹಾಜರಾಗಿದ್ದರೆ ಆತನನ್ನು ಪರೀಕ್ಷಿಸತಕ್ಕದ್ದು ಮತ್ತು ಅರ್ಜಿದಾರನ ತಂದೆತಾಯಿ/ಪಾಲಕರನ್ನು ಮತ್ತು ಅರ್ಜಿದಾರನ ಮತ್ತು ಅವನ ತಂದೆತಾಯಿ/ಪಾಲಕರ ಸಾಮಾಜಿಕ ಸ್ಥಾನಮಾನಗಳನ್ನು ತಿಳಿದಿರುವ ಇತರ ಯಾವೊಬ್ಬ ವ್ಯಕ್ತಿಯನ್ನು ಸಹ ಪರೀಕ್ಷಿಸಬಹುದು :

ಪರಂತು, ಅರ್ಜಿದಾರನು ಅನುಸೂಚಿತ ಬುಡಕಟ್ಟಿಗೆ ಸೇರಿದವನಾಗಿದ್ದ ಸಂದರ್ಭದಲ್ಲಿ, ಮಾನವ ಶಾಸ್ತ್ರ ಮತ್ತು ಜನಾಂಗಕ್ಕೆ ಸಂಬಂಧಿಸಿದ ಗುಣಲಕ್ಷಣಗಳು, ದೇವತೆಗಳು, ಆಚರಣೆಗಳು, ಸಂಪ್ರದಾಯಗಳು, ವಿವಾಹ ಪದ್ಧತಿ, ಉತ್ತರ ಕ್ರಿಯೆಗಳು, ಶವಗಳನ್ನು ಹೂಳುವ ವಿಧಾನಗಳು ಮತ್ತು ಅಂಥ ಇತರೆ ವಿಷಯಗಳ ಬಗ್ಗೆ ಕೂಡ ತಹಶಿಲ್ದಾರನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(ಸಿ) ತಹಶಿಲ್ದಾರನು, ಅರ್ಜಿದಾರನು ಮತ್ತು ಆತನ ತಂದೆ ತಾಯಿಗಳು / ಪಾಲಕರು ಅವರು ಯಾವ ಗ್ರಾಮ ಅಥವಾ ಪ್ರದೇಶಕ್ಕೆ ಸೇರಿರುವರೋ ಆ ಗ್ರಾಮ ಅಥವಾ ಪ್ರದೇಶದಲ್ಲಿ ತಮಟೆ ಬಾರಿಸುವ ಮೂಲಕ ಅಥವಾ ಇತರ ಯಾವುದೇ ಅನುಕೂಲಕರವಾದ ರೀತಿಯಲ್ಲಿ ಇತರ ಸಾರ್ವಜನಿಕ ನೋಟೀಸನ್ನು ನೀಡತಕ್ಕದ್ದು. ಅಂಥ ನೋಟೀಸಿಗೆ ಪ್ರತಿಕ್ರಿಯೆಯಾಗಿ ಅಥವಾ ಅನ್ಯಥಾ ಯಾವೊಬ್ಬ ವ್ಯಕ್ತಿ ಅಥವಾ ಸಂಘವು ಅರ್ಜಿದಾರನ ಕ್ಲೇಮನ್ನು ವಿರೋಧಿಸಿದರೆ, ಅಂಥ ವ್ಯಕ್ತಿ ಅಥವಾ ಸಂಘಕ್ಕೆ ವಿಚಾರಣೆಯ ಸಮಯದಲ್ಲಿ ಸಾಕ್ಷ್ಯವನ್ನು ಒದಗಿಸಲು ಅವಕಾಶವನ್ನು ಕೂಡ ನೀಡತಕ್ಕದ್ದು.

(ಡಿ) ಅರ್ಜಿದಾರನು ಮಾಡಿದ ಕ್ಲೇಮಿನ ನೈಜತೆಗೆ ಸಂಬಂಧಿಸಿದಂತೆ ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವೊಬ್ಬ ಅಧಿಕಾರಿಯ ಸಹಾಯವನ್ನು ತಹಶಿಲ್ದಾರನು ಪಡೆಯಬಹುದು.

(ಇ) ಅರ್ಜಿದಾರರು ಅಥವಾ ಅವರ ತಂದೆ ತಾಯಿ / ಪೋಷಕರ ವಾಸ ಸ್ಥಳವು, ತಹಶಿಲ್ದಾರರ ಅಧಿಕಾರವ್ಯಾಪ್ತಿ ಪ್ರದೇಶದೊಳಗೆ ಇರದಿದ್ದ ಸಂದರ್ಭದಲ್ಲಿ, ಆತನು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗೆ, ಅವರಲ್ಲಿ ಲಭ್ಯವಿರುವ ವೃತ್ತಿ ಸಂಬಂಧದ ಸಹಾಯವನ್ನು ನೀಡುವಂತೆ ಉಲ್ಲೇಖದ ಮೂಲಕ ಕೇಳಬಹುದು.

(ಎಫ್) ತಹಶಿಲ್ದಾರನು, ಅವಶ್ಯವೆಂದು ಭಾವಿಸಿದರೆ, ಹೆಚ್ಚಿನ ಮಾಹಿತಿ, ದಸ್ತಾವೇಜು ಅಥವಾ ವಿಷಯಗಳನ್ನು ತರಿಸಿಕೊಳ್ಳಬಹುದು.

(ಜಿ) ತಹಶಿಲ್ದಾರನು, ಮೇಲೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ನಂತರ ಅರ್ಜಿಯನ್ನು ಸ್ವೀಕರಿಸಿದ ಎರಡು ತಿಂಗಳ ಒಳಗಾಗಿ, ಜಾತಿ ಪ್ರಮಾಣ ಪತ್ರವನ್ನು ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಡಿ, ಇ ಅಥವಾ ಎಫ್ ನಮೂನೆಯಲ್ಲಿ ನೀಡಬಹುದು ಅಥವಾ ಕ್ಲೇಮನ್ನು ತಿರಸ್ಕರಿಸಬಹುದು.

**3ಬಿ. 4ಎ ಪ್ರಕರಣದ ಅಡಿಯಲ್ಲಿಯ ಆದೇಶದ ವಿರುದ್ಧ ಅಪೀಲು** - 4ಬಿ ಪ್ರಕರಣದ ಅಡಿಯಲ್ಲಿಯ ಒಂದು ಅಪೀಲನ್ನು ಸ್ವೀಕರಿಸಿದ ನಂತರ, ಅಸಿಸ್ಟೆಂಟ್ ಕಮೀಷನರು, ತಹಶಿಲ್ದಾರರಿಂದ ದಾಖಲೆಗಳನ್ನು ಪಡೆದುಕೊಳ್ಳಬಹುದು ಮತ್ತು ಉಭಯ ಪಕ್ಷಕಾರರಿಗೂ

ಸುನಾವಣೆಯ ಅವಕಾಶವನ್ನು ನೀಡಿದ ನಂತರ ಮತ್ತು ಅವಶ್ಯಕವಾದಲ್ಲಿ ಯಾವುದೇ ಸ್ಥಳೀಯ ವಿಚಾರಣೆ ನಡೆಸಿದ ನಂತರ, ಆ ಬಗ್ಗೆ ಕಾರಣಗಳನ್ನು ನೀಡಿ ಅಪೀಲನ್ನು ದಾಖಲು ಮಾಡಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಆದೇಶವನ್ನು ಹೊರಡಿಸಬಹುದು.

3ಸಿ. **ತಹಶಿಲ್ದಾರನು ನೀಡಿದ ಪ್ರಮಾಣ ಪತ್ರದ ಸಿಂಧುತ್ವ** - (1) 4ಎ ಪ್ರಕರಣದ ಅಡಿಯಲ್ಲಿ ನೀಡಿದ ಜಾತಿ ಪ್ರಮಾಣ ಪತ್ರವು, ಅದನ್ನು ರದ್ದುಪಡಿಸುವವರೆಗೆ ಅದು ಸಿಂಧುವಾಗಿರತಕ್ಕದ್ದು.

(2) 4ಎ ಪ್ರಕರಣದ ಅಡಿಯಲ್ಲಿ ನೀಡಿದ ಆದಾಯ ಮತ್ತು ಜಾತಿ ಪ್ರಮಾಣ ಪತ್ರವು,-

(ಎ) ಈ ಮುಂದೆ ನಿರ್ದಿಷ್ಟಪಡಿಸಿದ ಅಧ್ಯಯನ ಕೋರ್ಸುಗಳು, ಎಂದರೆ :-

(i) Iರಿಂದ VIIನೇ ತರಗತಿಗಳು,

(ii) VIIIರಿಂದ Xನೇ ತರಗತಿಗಳು ;

(iii) ಡಿಪ್ಲೋಮಾ ಕೋರ್ಸುಗಳು ಅಥವಾ ಇತರೆ ತರಬೇತಿ ಕೋರ್ಸುಗಳು ಒಳಗೊಂಡಂತೆ; ಪದವಿ ಪೂರ್ವ / ತತ್ಸಮಾನ ಕೋರ್ಸುಗಳು ;

(iv) ವೃತ್ತಿ ಕೋರ್ಸುಗಳು ಒಳಗೊಂಡಂತೆ ಪದವಿ ಹಂತದ ಅಥವಾ ತತ್ಸಮಾನವಾದ ಕೋರ್ಸುಗಳು;

(v) ಸ್ನಾತಕೋತ್ತರ ಕೋರ್ಸುಗಳು,

- ಪೂರ್ಣಗೊಳ್ಳುವವರೆಗೆ ಸಿಂಧುವಾಗಿರತಕ್ಕದ್ದು.

(ಬಿ) ಉದ್ಯೋಗದ ಉದ್ದೇಶಕ್ಕಾಗಿ ಮತ್ತು ಇತರ ಆರ್ಥಿಕ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ, ನೀಡಿಕೆ ದಿನಾಂಕದಿಂದ ಒಂದು ವರ್ಷದ ಅವಧಿಗೆ,

- ಸಿಂಧುವಾಗಿರತಕ್ಕದ್ದು.''

**4. 4ನೇ ನಿಯಮದ ತಿದ್ದುಪಡಿ** - ಸದರಿ ನಿಯಮಗಳ 4ನೇ ನಿಯಮದಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

''ಪರಂತು, ರಾಜ್ಯ ಸರ್ಕಾರವು, ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ನೀಡಲಾದ ಜಾತಿ ಪ್ರಮಾಣ ಪತ್ರದ ಸತ್ಯಾಪನೆಗಾಗಿ ಯಾವುದೇ ಜಿಲ್ಲೆಗೆ, ಈ ಮುಂದಿನ ಸದಸ್ಯರನ್ನು ಒಳಗೊಂಡ ಹೆಚ್ಚುವರಿ ಜಾತಿ ಪರಿಶೀಲನಾ ಸಮಿತಿಯೊಂದನ್ನು ರಚಿಸಬಹುದು, ಎಂದರೆ :-

| | | |
|---|---|---|
| i) | ಸ್ಪೆಷಲ್ ಡೆಪ್ಯುಟಿ ಕಮೀಷನರ್ ದರ್ಜೆಗೆ ಕಡಿಮೆಯಲ್ಲದ, ರಾಜ್ಯ ಸರ್ಕಾರವು ನೇಮಕ ಮಾಡಿದ ಒಬ್ಬ ಅಧಿಕಾರಿ | ಅಧ್ಯಕ್ಷರು |
| (ii) | ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್ | ಸದಸ್ಯರು |

(iii) ತಾಲೂಕಿನ ತಹಶಿಲ್ದಾರ್ ಸದಸ್ಯರು

(iv) ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಸದಸ್ಯರು''

5. 5ನೇ ನಿಯಮದ ತಿದ್ದುಪಡಿ - ಸದರಿ ನಿಯಮಗಳ 5ನೇ ನಿಯಮದಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

''ಪರಂತು, ರಾಜ್ಯ ಸರ್ಕಾರವು, ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ನೀಡಲಾದ ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಸತ್ಯಾಪನೆಗಾಗಿ ಯಾವುದೇ ಜಿಲ್ಲೆಗೆ ಈ ಮುಂದಿನ ಸದಸ್ಯರುಗಳನ್ನು ಒಳಗೊಂಡ ಹೆಚ್ಚುವರಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪರಿಶೀಲನಾ ಸಮಿತಿಯೊಂದನ್ನು ರಚಿಸಬಹುದು, ಎಂದರೆ :-

i) ಸ್ಪೆಷಲ್ ಡೆಪ್ಯುಟಿ ಕಮೀಷನರ್ ದರ್ಜೆಗೆ ಕಡಿಮೆಯಲ್ಲದ, ರಾಜ್ಯ ಸರ್ಕಾರವು ನೇಮಕ ಮಾಡಿದ ಒಬ್ಬ ಅಧಿಕಾರಿ ಅಧ್ಯಕ್ಷರು

(ii) ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರ್ ಸದಸ್ಯರು

(iii) ತಾಲೂಕಿನ ತಹಶಿಲ್ದಾರ್ ಸದಸ್ಯರು

(iv) ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿ ಸದಸ್ಯ ಕಾರ್ಯದರ್ಶಿ''

6. 5ಎ. ಹೊಸ ನಿಯಮದ ಸೇರ್ಪಡೆ - ಸದರಿ ನಿಯಮಗಳ 5ನೇ ನಿಯಮದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

''5ಎ. ಜಾತಿ ಪರಿಶೀಲನಾ ಸಮಿತಿಯು ನೀಡಿದ ಪ್ರಮಾಣ ಪತ್ರದ ಸಿಂಧುತ್ವ - (1) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಯ ಹೆಸರಿನಲ್ಲಿ ಜಾತಿ ಪರಿಶೀಲನಾ ಸಮಿತಿಯು ವಿದ್ಯಾಭ್ಯಾಸ ಮತ್ತು ಉದ್ಯೋಗದ ಉದ್ದೇಶಕ್ಕಾಗಿ ನೀಡಿದ ಜಾತಿ ಪ್ರಮಾಣ ಪತ್ರದ ಸಿಂಧುತ್ವವು, ಅದನ್ನು ರದ್ದುಗೊಳಿಸುವವರೆಗೆ ಅಥವಾ ಅರ್ಜಿದಾರನು ತನ್ನ ಧಾರ್ಮಿಕ ನಿಷ್ಠೆಯನ್ನು ಬದಲಾಯಿಸುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಜಾರಿಯಲ್ಲಿರತಕ್ಕದ್ದು

(2) ಹಿಂದುಳಿದ ವರ್ಗಗಳ ಪ್ರವರ್ಗ-1ಕ್ಕೆ ಸೇರಿದ ವ್ಯಕ್ತಿಯ ಹೆಸರಿನಲ್ಲಿ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ನೀಡಿದ ಪ್ರಮಾಣ ಪತ್ರದ ಸಿಂಧುತ್ವವು, ವಿದ್ಯಾಭ್ಯಾಸದ ಮತ್ತು ಉದ್ಯೋಗದ ಉದ್ದೇಶಕ್ಕಾಗಿ, ಆತನ ಜಾತಿಗೆ ಮೇಲು ಸ್ಥರದ (ಕ್ರೀಮಿಲೇಯರ್) ಮಾನದಂಡಗಳನ್ನು ಅನ್ವಯಿಸದೇ ಜಾತಿಗೆ ಮೀಸಲಾತಿ ಸೌಲಭ್ಯ ಲಭ್ಯವಿರುವವರೆಗೆ ಅಥವಾ ಅದನ್ನು ರದ್ದುಗೊಳಿಸುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಜಾರಿಯಲ್ಲಿರತಕ್ಕದ್ದು.''

---

**7. 6ಎ ಹೊಸ ನಿಯಮದ ಸೇರ್ಪಡೆ** - ಸದರಿ ನಿಯಮಗಳ 6ನೇ ನಿಯಮದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"**6ಎ. ಜಾತಿ ಹಾಗೂ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯಿಂದ ಪರಿಶೀಲನೆ** - ಜಾತಿ ಪರಿಶೀಲನಾ ಸಮಿತಿ ಅಥವಾ ಸಂದರ್ಭಾನುಸಾರ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು, ಸಿಂಧುತ್ವ ಪ್ರಮಾಣ ಪತ್ರದ ನೀಡಿಕೆಗಾಗಿ ಅರ್ಜಿಯನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಸಮಾಜ ಕಲ್ಯಾಣ ಇಲಾಖೆಯ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗೆ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ, ಹಿಂದುಳಿದ ವರ್ಗಗಳ ಇಲಾಖೆಯ ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗೆ, ಸತ್ಯಾಪನೆಗಾಗಿ ಮತ್ತು ಸ್ಥಳೀಯ ವಿಚಾರಣೆ ನಡೆಸಿದ ನಂತರ ವರದಿ ಸಲ್ಲಿಸುವುದಕ್ಕಾಗಿ ಕಳುಹಿಸತಕ್ಕದ್ದು."

**8. 7ನೇ ನಿಯಮದ ಪ್ರತಿಯೋಜನೆ** - ಸದರಿ ನಿಯಮಗಳ 7ನೇ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"**7. ಸಿಂಧುತ್ವ ಪ್ರಮಾಣ ಪತ್ರ ನೀಡಿಕೆ** - (1) 6ಎ ನಿಯಮದ ಅಡಿಯಲ್ಲಿ ಕಳುಹಿಸಿದ ಅರ್ಜಿಯ ಸಂಬಂಧದಲ್ಲಿ ವರದಿಯನ್ನು ಪಡೆದ ತರುವಾಯ, ಜಾತಿ ಪರಿಶೀಲನಾ ಸಮಿತಿ ಹಾಗೂ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು, ಸಂಬಂಧಪಟ್ಟ ಪಕ್ಷಕಾರರಿಗೆ ಅವಕಾಶವನ್ನು ನೀಡಿದ ತರುವಾಯ ವಿಚಾರಣೆಯನ್ನು ನಡೆಸತಕ್ಕದ್ದು.

(2) ಸಮಿತಿಯು, ಶಾಲಾ ದಾಖಲೆಗಳನ್ನು, ಜನನ ನೋಂದಣಿ ಪ್ರಮಾಣ ಪತ್ರ ಯಾವುದಾದರೂ ಇದ್ದರೆ ಅದನ್ನು ಮತ್ತು ಇತರೆ ಅಂಥ ಸಂಬಂಧಿಸಿದ ವಿಷಯಗಳನ್ನು ಪರೀಕ್ಷಿಸಬಹುದು ಮತ್ತು ಅರ್ಜಿದಾರನ ಸಮುದಾಯದ ಬಗ್ಗೆ ತಿಳಿದಿರುವ ಇತರೆ ಯಾವೊಬ್ಬ ವ್ಯಕ್ತಿಯನ್ನು ಸಹ ಪರೀಕ್ಷಿಸಬಹುದು :

ಪರಂತು, ಅರ್ಜಿದಾರನು ಅನುಸೂಚಿತ ಬುಡಕಟ್ಟಿಗೆ ಸೇರಿದ್ದರೆ, ಸಮಿತಿಯು, ಮಾನವ ಶಾಸ್ತ್ರ ಹಾಗೂ ಜನಾಂಗಕ್ಕೆ ಸಂಬಂಧಿಸಿದ ಗುಣಲಕ್ಷಣಗಳು, ದೇವತೆಗಳು, ಆಚರಣೆಗಳು, ಸಂಪ್ರದಾಯಗಳು, ವಿವಾಹ ಪದ್ಧತಿಗಳು, ಉತ್ತರ ಕ್ರಿಯೆಗಳು, ಶವಗಳನ್ನು ಹೂಳುವ ಪದ್ಧತಿಗಳು ಮತ್ತು ಅಂಥ ಇತರೆ ವಿಷಯಗಳನ್ನು ಕೂಡ ಪರೀಕ್ಷಿಸಬಹುದು.

(3) ಅಂಥ ವಿಚಾರಣೆಯ ತರುವಾಯ ಅರ್ಜಿದಾರನ ಕ್ಲೇಮು ನಿಜವೆಂದು ಸಮಿತಿಗೆ ಕಂಡುಬಂದರೆ, ಅದು, ಕೋರಲಾಗಿದ್ದ ಪ್ರಮಾಣ ಪತ್ರವನ್ನು 1ಎ ನಮೂನೆಯಲ್ಲಿ ನೀಡಬಹುದು, ಆದರೆ ಅರ್ಜಿದಾರನು ಸುಳ್ಳು ಮನವಿಯನ್ನು ಸಲ್ಲಿಸುವ ಮೂಲಕ ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವನೆಂದು ಸಮಿತಿಗೆ ತಿಳಿದುಬಂದರೆ, ಹಾಗೆ ತಿರಸ್ಕರಿಸುವುದಕ್ಕೆ ಇದ್ದ ಕಾರಣಗಳನ್ನು ತಿಳಿಸಿ ಅರ್ಜಿಯನ್ನು ತಿರಸ್ಕರಿಸುವ ಆದೇಶವನ್ನು ಹೊರಡಿಸತಕ್ಕದ್ದು. ಈ ಉಪ ನಿಯಮದ ಅಡಿಯಲ್ಲಿ ಆದೇಶವನ್ನು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಹೊರಡಿಸತಕ್ಕದ್ದು.

(4) (2) ಮತ್ತು (3)ನೇ ಉಪನಿಯಮಗಳಲ್ಲಿ ಉಲ್ಲೇಖಿಸಿದ ವಿಚಾರಣೆಯನ್ನು ನಡೆಸಿದ ನಂತರವೂ ಕ್ಲೇಮು ಅನುಮಾನಾಸ್ಪದವೆಂದು ಸಮಿತಿಗೆ ಕಂಡು ಬಂದಲ್ಲಿ ಮತ್ತು ಒಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿದ್ದಲ್ಲಿ, ಅದು ವಿಷಯವನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ವಿವರವಾದ ತನಿಖೆ ಮತ್ತು ವರದಿಗಾಗಿ ಕಳುಹಿಸತಕ್ಕದ್ದು. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದಿಂದ ವರದಿಯನ್ನು ಸ್ವೀಕರಿಸಿದ ನಂತರ, ಸಮಿತಿಯು, ತಾನು ಸೂಕ್ತವೆಂದು ಭಾವಿಸಬಹುದಾದಂತೆ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಅರ್ಜಿದಾರನಿಗೆ ಸುನಾವಣೆಗಾಗಿ ಅವಕಾಶವನ್ನು ನೀಡಿದ ತರುವಾಯ, ಪ್ರಕರಣವನ್ನು ಗುಣದೋಷಗಳ ಆಧಾರದ ಮೇಲೆ ವಿಲೆಮಾಡತಕ್ಕದ್ದು. ಈ ಉಪನಿಯಮದ ಅಡಿಯಲ್ಲಿ ಆದೇಶವನ್ನು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಹೊರಡಿಸತಕ್ಕದ್ದು.

(5) ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯ ಆದೇಶದಿಂದ ಬಾಧಿತವಾದ ಯಾವೊಬ್ಬ ವ್ಯಕ್ತಿಯು, ಡಿವಿಜನಲ್ ಕಮೀಷನರನಿಗೆ ಅಪೀಲನ್ನು ಸಲ್ಲಿಸಬಹುದು. ಅಂಥ ಅಪೀಲನ್ನು ಸಲ್ಲಿಸಿದ ದಿನಾಂಕದಿಂದ ನಲವತ್ತೈದು ದಿನಗಳೊಳಗೆ, ಡಿವಿಜನಲ್ ಕಮೀಷನರ್ ಅವರು, ಉಭಯ ಪಕ್ಷಕಾರರಿಗೆ ಸುನಾವಣೆಗಾಗಿ ಅವಕಾಶವನ್ನು ನೀಡಿದ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅಂಥ ಆದೇಶವನ್ನು ಹೊರಡಿಸತಕ್ಕದ್ದು."

**9. 7ಎ ಮತ್ತು 7ಬಿ ಹೊಸ ನಿಯಮಗಳ ಸೇರ್ಪಡೆ** - ಸದರಿ ನಿಯಮಗಳ 7ನೇ ನಿಯಮದ ತರುವಾಯ, ಈ ಮುಂದಿನ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ :-

"**7ಎ. ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಿದ್ದಕ್ಕಾಗಿ ಪ್ರಾಸಿಕ್ಯೂಷನ್ ನಡೆಸುವುದು** - (1) ಸಂದರ್ಭಾನುಸಾರ ಜಾತಿ ಪರಿಶೀಲನಾ ಸಮಿತಿ ಅಥವಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ಮತ್ತು ಡಿವಿಜನಲ್ ಕಮೀಷನರು, ಸಿಂಧುತ್ವ ಪ್ರಮಾಣ ಪತ್ರದ ನೀಡಿಕೆಗಾಗಿನ ಅರ್ಜಿದಾರನ ಕ್ಲೇಮನ್ನು ತಿರಸ್ಕರಿಸಿ ಹೊರಡಿಸಿದ ಆದೇಶದ ಪ್ರತಿಯನ್ನು, ಸಂದರ್ಭಾನುಸಾರ, ಅಂಥ ಕ್ಲೇಮನ್ನು ತಿರಸ್ಕರಿಸಿದ ಬಗ್ಗೆ ಅಪೀಲಿನ ಮೇಲಿನ ಆದೇಶದ ಪ್ರತಿಯನ್ನು, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು.

(2) ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯವು, ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಿರುವ ಅಂಥ ಕ್ಲೇಮುದಾರನ ಮೇಲೆ ಪ್ರಾಸಿಕ್ಯೂಷನ್ ನಡೆಸತಕ್ಕದ್ದು.

**7ಬಿ. ಸುಳ್ಳು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಪಡೆದುಕೊಂಡ ಆರ್ಥಿಕ ಪ್ರಯೋಜನಗಳನ್ನು ಹಿಂದಕ್ಕೆ ಪಡೆಯುವುದು** - ಸರ್ಕಾರವು ಅಥವಾ ಇತರೆ ಯಾವುದೇ ಏಜೆನ್ಸಿಯು ಸುಳ್ಳು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ವಿದ್ಯಾರ್ಥಿ ವೇತನದ, ಅನುದಾನದ, ಭತ್ಯೆಗಳ ಅಥವಾ ಇತರೆ ಆರ್ಥಿಕ ಪ್ರಯೋಜನಗಳ ರೂಪದಲ್ಲಿ ಯಾವೊಬ್ಬ ವ್ಯಕ್ತಿಗೆ ಯಾವುದೇ ಮೊಬಲಗನ್ನು ಸಂದಾಯ ಮಾಡಿದ್ದರೆ, ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ, ಅಂಥ ವ್ಯಕ್ತಿಯಿಂದ ಅದನ್ನು ವಸೂಲು ಮಾಡಿಕೊಳ್ಳಲು ಅವನು ಬದ್ಧನಾಗಿರತಕ್ಕದ್ದು."

**10. 9ಎ ನಿಯಮವನ್ನು ಬಿಟ್ಟು ಬಿಡುವುದು** - ಸದರಿ ನಿಯಮಗಳ 9ಎ ನಿಯಮವನು.

ಪರಂತು, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ನಿಯಮಗಳು, 2000ದ ಪ್ರಾರಂಭದ ದಿನಾಂಕದಂದು ಪರಿಶೋಧನಾ ಸಮಿತಿಯ ಮುಂದೆ 9ಎ ನಿಯಮದ ಅಡಿಯಲ್ಲಿಯ ಬಾಕಿ ಇರುವ ಪ್ರಕರಣಗಳು, ಸಂಬಂಧಪಟ್ಟ ಜಾತಿ ಪರಿಶೀಲನಾ ಸಮಿತಿಗಳಿಗೆ ವರ್ಗಾಯಿತವಾಗತಕ್ಕದ್ದು ಮತ್ತು ಅಂಥ ಪ್ರಕರಣಗಳನ್ನು ಅವುಗಳ ಮುಂದೆ ದಾಖಲು ಮಾಡಿದ್ದರೆ ಹೇಗೋ ಹಾಗೆ ಅವು ಅವುಗಳನ್ನು ವಿಲೆ ಮಾಡತಕ್ಕದ್ದು.

**11. 10ನೇ ನಿಯಮದ ಪ್ರತಿಯೋಜನೆ.-** ಸದರಿ ನಿಯಮಗಳ 10ನೇ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ :-

"**10. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ಕ್ರಮ ಕೈಗೊಳ್ಳಲು ಅಧಿಕಾರ ಇತ್ಯಾದಿ -** (1) ಅಧಿನಿಯಮ ಮತ್ತು ನಿಯಮಗಳ ವಿವಿಧ ಉಪಬಂಧಗಳ ಉಲ್ಲಂಘನೆಗಾಗಿ ಕ್ರಮ ಕೈಗೊಳ್ಳಲು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಸಂಬಂಧದಲ್ಲಿ ಸಮಾಜ ಕಲ್ಯಾಣದ ನಿರ್ದೇಶಕರು, ಬುಡಕಟ್ಟು ಕಲ್ಯಾಣ ನಿರ್ದೇಶಕರು ಅಥವಾ ಅವರಿಂದ ಪ್ರಾಧಿಕೃತನಾದ ಅಧಿಕಾರಿ ಮತ್ತು ಹಿಂದುಳಿದ ವರ್ಗಗಳ ಸಂಬಂಧದಲ್ಲಿ ಹಿಂದುಳಿದ ವರ್ಗಗಳ ನಿರ್ದೇಶಕರು ಅಥವಾ ಅವರಿಂದ ಪ್ರಾಧಿಕೃತನಾದ ಅಧಿಕಾರಿ (ಇಲ್ಲಿ ಇನ್ನು ಮುಂದೆ ಪ್ರಾಧಿಕೃತ ಅಧಿಕಾರಿಯೆಂದು ಉಲ್ಲೇಖಿಸಲಾಗಿದೆ) ಇವರು ಪ್ರಾಧಿಕಾರಿಗಳಾಗಿರುತ್ತಾರೆ.

(2) ಪ್ರಾಧಿಕೃತ ಅಧಿಕಾರಿಯು, ಪ್ರವೇಶಗಳು ಅಥವಾ ನೇಮಕಾತಿಗಳ ವಿಷಯದಲ್ಲಿ, ಅಧಿ ನಿಯಮ, ನಿಯಮಗಳ ಅಥವಾ ರಾಜ್ಯದ ಮೀಸಲಾತಿ ನೀತಿಯ ಯಾವುವೇ ಉಪಬಂಧಗಳ ಉಲ್ಲಂಘನೆಯಾಗಿದೆಯೆಂದು ನಂಬಲು ಕಾರಣಗಳಿದ್ದರೆ ಅವನು, ಪ್ರವೇಶ ನೀಡುವ, ಪ್ರಾಧಿಕಾರಿಗೆ ಅಥವಾ ನೇಮಕಾತಿ ಪ್ರಾಧಿಕಾರಿಗೆ ಅಂಥ ಉಲ್ಲಂಘನೆಯನ್ನು ಸರಿಪಡಿಸಲು ಮೂವತ್ತು ದಿನಗಳ ಅವಧಿಯನ್ನು ನೀಡಿ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

(3) ಪ್ರವೇಶ ನೀಡುವ ಪ್ರಾಧಿಕಾರಿ ಅಥವಾ ನೇಮಕಾತಿ ಪ್ರಾಧಿಕಾರಿಯು, ಉಲ್ಲಂಘನೆಯನ್ನು ಸರಿಪಡಿಸುವಲ್ಲಿ ಅಥವಾ ಮನವರಿಕೆಯಾಗುವಂತೆ ಸಮರ್ಥನೆ ನೀಡಲು ವಿಫಲನಾದಲ್ಲಿ, ಪ್ರಾಧಿಕೃತ ಅಧಿಕಾರಿಯು, ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿದ ನೇಮಕಾತಿ ಅಥವಾ ಪ್ರವೇಶವು ಶೂನ್ಯವೆಂದು ಘೋಷಿಸತಕ್ಕದ್ದು :

ಪರಂತು, ಅಂಥ ಘೋಷಣೆಯನ್ನು ಮಾಡುವ ಮೊದಲು, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಗೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(4) ಪ್ರವೇಶ ನೀಡುವ ಪ್ರಾಧಿಕಾರಿ ಅಥವಾ ನೇಮಕಾತಿ ಪ್ರಾಧಿಕಾರಿಯು, ತೃಪ್ತಿಕರ ಸಮರ್ಥನೆ ನೀಡುವಲ್ಲಿ ವಿಫಲನಾದಾಗ, ಪ್ರಾಧಿಕೃತ ಅಧಿಕಾರಿಯು, ಅಂಥ ಪ್ರವೇಶ ನೀಡುವ ಪ್ರಾಧಿಕಾರಿ ಅಥವಾ ನೇಮಕಾತಿ ಪ್ರಾಧಿಕಾರಿಯನ್ನು ಕಾನೂನು ಕ್ರಮಕ್ಕೆ (ಪ್ರಾಸಿಕ್ಯೂಷನ್‌ಗೆ) ಗುರಿಪಡಿಸಲು ಕ್ರಮ ಕೈಗೊಳ್ಳತಕ್ಕದ್ದು.

12. 11ನೇ ನಿಯಮದ ತಿದ್ದುಪಡಿ - ಸದರಿ ನಿಯಮಗಳ 11ನೇ ನಿಯಮದಲ್ಲಿ (1)ನೇ ಉಪ ನಿಯಮದ (ii) ನೇ ಖಾಬಿನ ತರುವಾಯ, ಈ ಮುಂದಿನವನ್ನು ಸೇರಿಸತಕ್ಕದ್ದು, ಎಂದರೆ :-

"(iii) ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಕೂಡ ವಿವಿಧ ಪ್ರವರ್ಗಗಳ ಅರ್ಜಿದಾರರಿಂದ ಸ್ವೀಕರಿಸಿದ ಅರ್ಜಿಗಳ ಸ್ವೀಕೃತಿಯನ್ನು ತೋರಿಸಲು ನಮೂನೆ-3ಎಯಲ್ಲಿರುವಂತೆ ಒಂದು ವಹಿಯನ್ನು ನಿರ್ವಹಿಸತಕ್ಕದ್ದು."

13. 12ನೇ ನಿಯಮದ ಪ್ರತಿಯೋಜನೆ - ಸದರಿ ನಿಯಮಗಳ 12ನೇ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"12. ತಪಾಸಣೆಗಳು - (1) ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟುಗಳ ಸಂಬಂಧದಲ್ಲಿ ಸಮಾಜ ಕಲ್ಯಾಣ ವಿಸ್ತರಣಾಧಿಕಾರಿ / ಸಮಾಜ ಕಲ್ಯಾಣ ನಿರೀಕ್ಷಕನು ಮತ್ತು ಇತರ ಹಿಂದುಳಿದ ವರ್ಗಗಳ ಸಂಬಂಧದಲ್ಲಿ ಹಿಂದುಳಿದ ವರ್ಗಗಳ ನಿರೀಕ್ಷಣಾ ಸಹಾಯಕನು ಮತ್ತು ಆತನಿಗಿಂತ ಹಿರಿಯನಾದ ಇತರ ಅಧಿಕಾರಿಯು (ಇಲ್ಲಿ ಇನ್ನು ಮುಂದೆ ತನಿಖಾಧಿಕಾರಿಯೆಂದು ಉಲ್ಲೇಖಿಸಲಾಗಿದೆ), ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಮಾಡಿದ ಪ್ರವೇಶಗಳ ಅಥವಾ ನೇಮಕಾತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತಪಾಸಣೆ ಮಾಡಬಹುದು.

(2) ತಪಾಸಣಾಧಿಕಾರಿಯು, ಪ್ರವೇಶಗಳಿಗೆ ಅಥವಾ ನೇಮಕಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ತನ್ನ ಮುಂದೆ ಮಂಡಿಸುವಂತೆ ಕೋರಿದಾಗ ಅವುಗಳನ್ನು ಮಂಡಿಸುವುದು ಪ್ರವೇಶ ನೀಡುವ ಅಥವಾ ನೇಮಕ ಮಾಡುವ ಪ್ರಾಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು."

14. 13ನೇ ನಿಯಮದ ಪ್ರತಿಯೋಜನೆ - ಸದರಿ ನಿಯಮಗಳ 13ನೇ ನಿಯಮಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"13. ವಾರ್ಷಿಕ ವರದಿ - ಎಲ್ಲ ನೇಮಕಾತಿ ಪ್ರಾಧಿಕಾರಿಗಳು ಮತ್ತು ಸಾರ್ವಜನಿಕ ವಲಯದ ಎಲ್ಲಾ ಕಾರ್ಯಸಂಸ್ಥೆಗಳು, ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ವರದಿಯನ್ನು ನಮೂನೆ-4ರಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ನಮೂನೆ-5ರಲ್ಲಿ ಪ್ರತಿ ವರ್ಷದ ಮೇ ತಿಂಗಳ ಒಂದನೇ ದಿನಾಂಕದೊಳಗೆ ಮತ್ತು ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ವಾರ್ಷಿಕ ವರದಿಯನ್ನು, ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ನಮೂನೆ-6ರಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ನಮೂನೆ-7ರಲ್ಲಿ ಪ್ರತಿವರ್ಷದ ಸೆಪ್ಟೆಂಬರ್ ಒಂದನೇ ದಿನಾಂಕದೊಳಗಾಗಿ, ಈ ನಿಯಮಗಳಿಗೆ ಅನುಬಂಧಿಸಲಾದ ಅನುಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು."

15. ನಮೂನೆ. ಎ, ಬಿ, ಸಿ, ಡಿ, ಇ ಮತ್ತು ಎಫ್‌ಗಳ ಸೇರ್ಪಡೆ - ಸದರಿ ನಿಯಮಗಳ ನಮೂನೆ-1ರ ಮೊದಲು ಈ ಮುಂದಿನ ನಮೂನೆಗಳನ್ನು ಸೇರಿಸತಕ್ಕದ್ದು, ಎಂದರೆ :-

## ನಮೂನೆ-ಎ

### (ನಿಯಮ 3ಎ (1)ನ್ನು ನೋಡಿ)

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂಬಂಧದಲ್ಲಿ ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ

1. ಅರ್ಜಿದಾರನ ಹೆಸರು
2. ತಂದೆ / ತಾಯಿ / ಪೋಷಕರ (ತಂದೆ ತಾಯಿಗಳು ಜೀವಂತವಿರದಿದ್ದರೆ) ಹೆಸರು :
   ಪೋಷಕರ ಸಂದರ್ಭದಲ್ಲಿ ಅರ್ಜಿದಾರನೊಡನೆ ಅವರ ಸಂಬಂಧ.
3. (ಎ) ಅರ್ಜಿದಾರನ ಹುಟ್ಟಿದ ದಿನಾಂಕ
   (ಬಿ) ತಂದೆ / ತಾಯಿಯವರು ಹುಟ್ಟಿದ ಸ್ಥಳ
4. ಖಾಯಂ ವಿಳಾಸ
5. ಅಂಚೆ ವಿಳಾಸ
6. ಅರ್ಜಿದಾರನ / ತಂದೆತಾಯಿಯವರ ಅಥವಾ ಪೋಷಕರ ಸಮುದಾಯ / ಜಾತಿ / ಬುಡಕಟ್ಟು

### ಪ್ರಮಾಣದ ಮೇಲೆ ಘೋಷಣೆ

.............................. ಎಂಬಲ್ಲಿ ವಾಸವಾಗಿರುವ (ಪೂರ್ಣ ವಿಳಾಸ) .......................... ಎಂಬುವರ ಮಗ / ಮಗಳಾದ .............................. ಎಂಬ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಪ್ರಮಾಣದ ಮೇಲೆ ಈ ಮುಂದಿನಂತೆ ಹೇಳಿಕೆ ನೀಡುತ್ತೇನೆ, ಎಂದರೆ :-

ಅಭ್ಯರ್ಥಿಯಾದ ಶ್ರೀ / ಶ್ರೀಮತಿ .............................. ಇವರು ನನ್ನ ಮಗ / ಮಗಳು / ಅವಲಂಬಿತ / ಪ್ರತಿಪಾಲಿತ ಆಗಿರುವರು. ನಾನು ಮತ್ತು ಅಭ್ಯರ್ಥಿಯು, ಅನುಸೂಚಿತ ಜಾತಿ / ಬುಡಕಟ್ಟು ಎಂದು ಮಾನ್ಯತೆ ಪಡೆದ ಜಾತಿ / ಬುಡಕಟ್ಟಿಗೆ ಸೇರಿರುತ್ತೇವೆ.

ಈ ಘೋಷಣೆಯು ತಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವಾಗಿದೆ, ಆದಾಗ್ಯೂ, ಅದು ಸತ್ಯವಲ್ಲವೆಂದು ರುಜುವಾತಾದರೆ, ಭಾರತೀಯ ದಂಡ ಸಂಹಿತೆಯ ಪ್ರಕರಣ 171* ಮತ್ತು 181**ರ ಅಡಿಯಲ್ಲಿ ನಾನು ಸ್ವತಃ ಕ್ರಿಮಿನಲ್ ಕಾನೂನು ವ್ಯವಹರಣೆಗಳಿಗೆ ಗುರಿಯಾಗಲು ಮತ್ತು ಈ ಪ್ರಮಾಣ ಪತ್ರಕ್ಕನುಸಾರವಾಗಿ ನನ್ನ ಮಗ / ಮಗಳು / ಅವಲಂಬಿತ / ಪ್ರತಿಪಾಲಿತ ಇವರಿಗೆ

ನೀಡಿದ ಪ್ರಯೋಜನ ಅಥವಾ ರಿಯಾಯಿತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಬದ್ಧನಾಗಿರುತ್ತೇನೆ.

ಅಭ್ಯರ್ಥಿಯ ಸಹಿ

ತಂದೆ ತಾಯಿ / ಪೋಷಕರ
(ತಂದೆ ತಾಯಿಗಳು ಜೀವಂತವಿರದಿದ್ದರೆ)
ಸಹಿ

ಸ್ಥಳ :
ದಿನಾಂಕ :

ಸ್ಥಳ :
ದಿನಾಂಕ :

* ಯಾವುದೇ ಸರ್ಕಾರಿ ನೌಕರನಿಗೆ ಸತ್ಯವಲ್ಲದ ಮಾಹಿತಿ ನೀಡಿದಕ್ಕಾಗಿ ಭಾರತ ದಂಡ ಸಂಹಿತೆ ಪ್ರಕರಣ 171ರ ಅಡಿಯಲ್ಲಿ ಆರು ತಿಂಗಳುಗಳ ಅವಧಿಗೆ ವಿಸ್ತರಿಸಬಹುದಾದ ಸಾಮಾನ್ಯ ಕಾರಾಗೃಹವಾಸಕ್ಕೆ ಅಥವಾ 1,000/- ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡಕ್ಕೂ ಗುರಿಯಾಗುತ್ತಾನೆ.

** ಸಾರ್ವಜನಿಕ ನೌಕರನಿಗೆ ಪ್ರಮಾಣ ವಚನ ಬೋಧಿಸಲು ಅಥವಾ ದೃಢೀಕರಿಸಲು ಪ್ರಾಧಿಕೃತರಾದ ವ್ಯಕ್ತಿಗಳಿಗೆ ಪ್ರಮಾಣದ ಅಥವಾ ದೃಢೀಕರಣದ ಮೇಲೆ ನೀಡಿದ ಸುಳ್ಳು ಹೇಳಿಕೆ ನೀಡುವುದು ಭಾರತ ದಂಡ ಸಂಹಿತೆಯ ಪ್ರಕರಣ 181ರ ಅಡಿಯಲ್ಲಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆಗೆ ಮತ್ತು ಜುಲ್ಮಾನೆ ವಿಧಿಸುವುದಕ್ಕೆ ಗುರಿಪಡಿಸುತ್ತದೆ.

ಸೂಚನೆ : ಅಭ್ಯರ್ಥಿಗಳು ತಮ್ಮ ಅರ್ಜಿಗಳೊಡನೆ ಘೋಷಣೆಗಳನ್ನು ಮಾತ್ರ ಸಲ್ಲಿಸಬೇಕು. ಸಿಂಧುತ್ವ ಪ್ರಮಾಣ ಪತ್ರವನ್ನು ಸಂಸ್ಥೆಯ ಮುಖ್ಯಸ್ಥರಿಂದ / ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆಯತಕ್ಕದ್ದು.

## ನಮೂನೆ - ಬಿ

(ನಿಯಮ 3ಎ (1)ನ್ನು ನೋಡಿ)

ಹಿಂದುಳಿದ ವರ್ಗಗಳ ಪ್ರವರ್ಗ-1ರ ಸಂಬಂಧದಲ್ಲಿ ......................... ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ.

ಇವರಿಗೆ :
ತಹಶಿಲ್ದಾರರು
...................... ತಾಲ್ಲೂಕು
...................... ಜಿಲ್ಲೆ

ಮಾನ್ಯರೆ,

ಶ್ರೀ / ಶ್ರೀಮತಿ .............................. ಇವರ ಮಗ / ಮಗಳು / ಪತ್ನಿ / ಪತಿ ............................ ಎಂಬ ನಾನು, ಮೀಸಲಾತಿಯನ್ನು ಕ್ಲೇಮು ಮಾಡುವುದಕ್ಕಾಗಿ ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ಈ ಮುಂದಿನಂತೆ ಮಾಹಿತಿಯನ್ನು ಸಲ್ಲಿಸುತ್ತಿದ್ದೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ
2. ಅಭ್ಯರ್ಥಿಯ ಸ್ವಂತ ಸ್ಥಳ          ಗ್ರಾಮ :
   ತಾಲ್ಲೂಕು :
   ಜಿಲ್ಲೆ :
3. ಹುಟ್ಟಿದ ದಿನಾಂಕ
   ವಯಸ್ಸು ಮತ್ತು ಹುಟ್ಟಿದ ಸ್ಥಳ
4. ತಂದೆಯ / ತಾಯಿಯ / ಪೋಷಕರ /
   ಪತಿಯ / ಪತ್ನಿಯ ಹೆಸರು
   ಮತ್ತು ಉದ್ಯೋಗ
5. ಅಭ್ಯರ್ಥಿಯ ಈಗಿನ ವಿಳಾಸ
6. ಅಭ್ಯರ್ಥಿಯ ಖಾಯಂ ವಿಳಾಸ
7. ಅಭ್ಯರ್ಥಿಯ ಜಾತಿ / ಉಪ ಜಾತಿ
   ಮತ್ತು ಪ್ರವರ್ಗ (ದಾಖಲೆಗಳನ್ನು
   ಒದಗಿಸಬೇಕು)
8. ಅಭ್ಯರ್ಥಿಯು ವಿದ್ಯಾಭ್ಯಾಸ ಮಾಡಿದ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ವಿವರ.

| | | |
|---|---|---|
| | ವರ್ಷ ಮತ್ತು ತರಗತಿ | ಶಾಲೆಯ ಹೆಸರು ಮತ್ತು ಸ್ಥಳ |

## ಪ್ರಮಾಣ ಮಾಡಿ ನೀಡಿದ ಘೋಷಣೆ

ಮೇಲೆ ಒದಗಿಸಿದ ಮಾಹಿತಿ / ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ :
ದಿನಾಂಕ :          (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಿದ ವಿವರಣೆಗಳು ಸತ್ಯವಾಗಿವೆ ಮತ್ತು ಅವು ಸತ್ಯವಲ್ಲ ಎಂದು ಕಂಡು ಬಂದಲ್ಲಿ ನಾನು ಕ್ರಿಮಿನಲ್ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ / ಪೋಷಕರ ಸಹಿ
(ತಂದೆ/ತಾಯಿಗಳು ಜೀವಂತವಿರದಿದ್ದರೆ)

ಸ್ಥಳೀಯ ಇಬ್ಬರು ಸಾಕ್ಷಿದಾರರು :

1)

2)

ನಮೂನೆ - ಸಿ

(ನಿಯಮ 3-ಎ(1)ನ್ನು ನೋಡಿ)

ಆದಾಯ ಮತ್ತು ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ

ಇವರಿಗೆ :

ತಹಶಿಲ್ದಾರರು

...................... ತಾಲ್ಲೂಕು

...................... ಜಿಲ್ಲೆ

ಮಾನ್ಯರೆ,

ಶ್ರೀ / ಶ್ರೀಮತಿ .............................. ಇವರ ಮಗ / ಮಗಳು / ಪತ್ನಿ / ಪತಿ .............................. ಎಂಬ ನಾನು, ಮೀಸಲಾತಿಯನ್ನು ಕ್ಲೇಮು ಮಾಡಲು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ಈ ಮುಂದಿನ ಮಾಹಿತಿಯನ್ನು ಸಲ್ಲಿಸುತ್ತಿದ್ದೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ

2. ಅಭ್ಯರ್ಥಿಯ ಸ್ವಂತ ಸ್ಥಳ
   ಗ್ರಾಮ :
   ತಾಲ್ಲೂಕು :
   ಜಿಲ್ಲೆ :

3. ಹುಟ್ಟಿದ ದಿನಾಂಕ
   ವಯಸ್ಸು ಮತ್ತು ಹುಟ್ಟಿದ ಸ್ಥಳ

4. ತಂದೆಯ / ತಾಯಿ / ಪೋಷಕ / ಪತ್ನಿಯ / ಪತಿಯ ಹೆಸರು ಮತ್ತು ಉದ್ಯೋಗ (ಉದ್ಯೋಗವು ಸರ್ಕಾರಿ / ಅರೆ ಸರ್ಕಾರಿ / ಸಾರ್ವಜನಿಕ ಉದ್ಯಮ / ಖಾಸಗಿ)

5. ಅಭ್ಯರ್ಥಿಯ ಈಗಿನ ವಿಳಾಸ

7. ಅಭ್ಯರ್ಥಿಯ ಜಾತಿ / ಉಪ ಜಾತಿ ಮತ್ತು ಪ್ರವರ್ಗ (ದಾಖಲೆಗಳನ್ನು ಒದಗಿಸಬೇಕು)

8. ಅಭ್ಯರ್ಥಿಯು ವಿದ್ಯಾಭ್ಯಾಸ ಮಾಡಿದ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ವಿವರ

| | ವರ್ಷ ಮತ್ತು ತರಗತಿ | ಶಾಲೆಯ ಹೆಸರು ಮತ್ತು ಸ್ಥಳ |
|---|---|---|

9. ಅಭ್ಯರ್ಥಿಯ, ಅಭ್ಯರ್ಥಿಯ ತಂದೆ / ತಾಯಿ / ಪೋಷಕರ (ತಂದೆ / ತಾಯಿ ಜೀವಂತವಿಲ್ಲದಿದ್ದರೆ) ವಾರ್ಷಿಕ ಆದಾಯ (ಸರ್ಕಾರಿ / ಅರೆ ಸರ್ಕಾರಿ / ಸಾರ್ವಜನಿಕ ಉದ್ಯಮ / ಖಾಸಗಿ ಸೇವೆಯಲ್ಲಿದ್ದರೆ)
   (i) ವೇತನ ಶ್ರೇಣಿ
   (ii) ಜಮೀನಿನ ವಿವರ
   (iii) ಇತರ ಮೂಲಗಳು

10. ಮೇಲು ಸ್ಥರದ (ಕ್ರೀಮಿಲೇಯರ್) ಸೂತ್ರಗಳನ್ನು ಅನ್ವಯಿಸಿದ ನಂತರ ಅಭ್ಯರ್ಥಿಯು / ತಂದೆ / ತಾಯಿ / ಪತ್ನಿ / ಪತಿಯು ಇದಕ್ಕೆ ಅರ್ಹನಾಗಿದ್ದಾನೆಯೇ?

## ಪ್ರಮಾಣ ಮಾಡಿ ಹೇಳಿದ ಘೋಷಣೆ

ಮೇಲೆ ಒದಗಿಸಿದ ಮಾಹಿತಿಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕ ಪ್ರಮಾಣ ಮಾಡುತ್ತೇನೆ ಮತ್ತು ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ :
ದಿನಾಂಕ : (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಿದ ವಿವರಗಳು ಸತ್ಯವಾಗಿವೆ ಮತ್ತು ಒಂದು ವೇಳೆ ಅವು ಸತ್ಯವಲ್ಲವೆಂದು ಕಂಡು ಬಂದಲ್ಲಿ ನಾನು ಕ್ರಿಮಿನಲ್ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ/ತಾಯಿ / ಪೋಷಕರ ಸಹಿ
(ತಂದೆ/ತಾಯಿಗಳು ಜೀವಂತವಿಲ್ಲದಿದ್ದರೆ)

ಸ್ಥಳೀಯ ಇಬ್ಬರು ಸಾಕ್ಷಿದಾರರು :

ನಾವು ಅಭ್ಯರ್ಥಿಯನ್ನು / ತಂದೆ / ತಾಯಿ / ಪತ್ನಿ / ಪತಿಯನ್ನು ಮತ್ತು ಅವರ ಸಹಿಗಳನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ : 1.

(ಪೂರ್ಣ ವಿಳಾಸದೊಂದಿಗೆ) 2.

ಸ್ಥಳ :

## ನಮೂನೆ - ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

## ಪ್ರಮಾಣ ಪತ್ರ

.................... ರಾಜ್ಯದ / ಕೇಂದ್ರಾಡಳಿತ ಪ್ರದೇಶದ* .................... ಜಿಲ್ಲೆಯ / ವಿಭಾಗದ .................... ಗ್ರಾಮ / ಪಟ್ಟಣದ* ನಿವಾಸಿಯಾದ ಶ್ರೀ / ಶ್ರೀಮತಿ .................... ಎಂಬುವವರ ಮಗ / ಮಗಳಾದ ಶ್ರೀ / ಶ್ರೀಮತಿ .................... ಇವರು ಅನುಸೂಚಿತ ಜಾತಿ / ಅನುಸೂಚಿತ ಬುಡಕಟ್ಟು* ಎಂದು ಮಾನ್ಯ ಮಾಡಲಾಗಿರುವ ಜಾತಿ ಬುಡಕಟ್ಟಿಗೆ* ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

* ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950

* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950

* ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950

* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951.

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ(ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲಕ ತಿದ್ದುಪಡಿಯಾದಂತೆ).

* ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956.

* ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.

* ಸಂವಿಧಾನ (ದಾದರ್ ಮತ್ತು ನಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962.

* ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964.

* ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967.

* ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ / ಬುಡಕಟ್ಟುಗಳ ಆದೇಶ, 1988.

* ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ.

2. ಶ್ರೀ / ಶ್ರೀಮತಿ / ಕುಮಾರಿ * ..................... ಮತ್ತು / ಅಥವಾ ಅವನ* / ಅವಳ* ಕುಟುಂಬವು ........................ ರಾಜ್ಯ / ಕೇಂದ್ರಾಡಳಿತ ಪ್ರದೇಶದ ........................ ಜಿಲ್ಲಾ / ವಿಭಾಗದ* ............................... ಗ್ರಾಮ / ಪಟ್ಟಣದ ಸಾಮಾನ್ಯ ನಿವಾಸಿ(ಗಳು).

ಸಹಿ ....................................

ತಹಶಿಲ್ದಾರ್ ............................

ಸ್ಥಳ :
ದಿನಾಂಕ :

ಪದನಾಮ
ಕಚೇರಿಯ ಮೊಹರಿನೊಂದಿಗೆ

ರಾಜ್ಯ
ಕೇಂದ್ರಾಡಳಿತ ಪ್ರದೇಶ*

* ಅನ್ವಯವಾಗದಿರುವ ಪದಗಳನ್ನು ದಯವಿಟ್ಟು ಬಿಟ್ಟುಬಿಡಿ / ಹೊಡೆದು ಹಾಕಿ.

ಸೂಚನೆ :

ಇಲ್ಲಿ ಉಪಯೋಗಿಸಿದ ''ಸಾಮಾನ್ಯ ನಿವಾಸಿಗಳು'' ಎಂಬ ಪದಾವಳಿಯು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950ರ 20ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

ಭಾರತ ಸರ್ಕಾರದ ಪತ್ರ ಸಂಖ್ಯೆ : ಬಿಸಿ 12028/2/76-ಎಸ್‌ಸಿಟಿ-I ಗೃಹ ಮಂತ್ರಾಲಯದ ಅನುಸಾರವಾಗಿ, ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮವಾಗಿರುವುದಕ್ಕಾಗಿ, ಭಾರತ ಸರ್ಕಾರದ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ಪತ್ರ ಸಂಖ್ಯೆ 13-2-74-ಇಎಸ್ ಟಿ-(ಎಸ್‌ಸಿಟಿ) ದಿನಾಂಕ 5ನೇ ಆಗಸ್ಟ್ 1975ರಲ್ಲಿ ನಮೂದಿಸಿದ ಪ್ರಾಧಿಕಾರಿಯು, ರಾಷ್ಟ್ರಪತಿಗಳು ಸಂಬಂಧಪಟ್ಟ ಆದೇಶದ ಅಧಿಸೂಚನೆಯನ್ನು ಹೊರಡಿಸಿದ ಸಮಯದಲ್ಲಿ, ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ವ್ಯಕ್ತಿಯು, ತನ್ನ ಖಾಯಂ ವಾಸ ಸ್ಥಳವನ್ನು ಹೊಂದಿದ್ದ ಸ್ಥಳಕ್ಕೆ ಸೇರಿದವರೊಬ್ಬರಾಗಿರತಕ್ಕದ್ದು, ಅದೇ ರೀತಿಯಲ್ಲಿ, ಒಂದು ತಾಲ್ಲೂಕಿನ ರೆವಿನ್ಯೂ ಪ್ರಾಧಿಕಾರಿಯು ಇನ್ನೊಂದು ತಾಲ್ಲೂಕಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರಿಯಾಗುವುದಿಲ್ಲ.

## ನಮೂನೆ - ಇ

(ನಿಯಮ 3ಎ (2) (3) ನೋಡಿ)

### ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗೆ ನೀಡುವ ಪ್ರಮಾಣ ಪತ್ರ

.................................. ಗ್ರಾಮ / ಪಟ್ಟಣ / ನಗರದ ನಿವಾಸಿಯಾದ ಶ್ರೀ / ಶ್ರೀಮತಿ .................................. ಇವರ ಮಗ / ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ .................................. ಇವರು ಹಿಂದುಳಿದ ವರ್ಗಗಳ (ಪ್ರವರ್ಗ-) .................................. ಜಾತಿಯ .................................. ಉಪ ಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ : ತಹಶಿಲ್ದಾರ್

ದಿನಾಂಕ : ....................... ತಾಲ್ಲೂಕು

ಕಚೇರಿಯ ಮೊಹರು

## ನಮೂನೆ - ಎಫ್

(ನಿಯಮ 3ಎ (2) (3) ನೋಡಿ)

ಪ್ರವರ್ಗ-Iರ ಹೊರತಾಗಿ, ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ

.................................. ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ .................................. ಇವರ ಮಗ / ಮಗಳು / ಪತ್ನಿ ಯಾದ, ಶ್ರೀ / ಶ್ರೀಮತಿ / ಕುಮಾರಿ .................................. ಇವರು ಮತ್ತು ಆತನ / ಅವಳ ತಂದೆ ತಾಯಿ / ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ : ಎಸ್‌ಡಬ್ಲ್ಯೂಡಿ 150 ಬಿಸಿಎ 94 ದಿನಾಂಕ : 17.9.1994 ಮತ್ತು ಎಸ್‌ಡಬ್ಲ್ಯೂಡಿ 251 ಬಿಸಿಎ 94 ದಿನಾಂಕ : 31.1.1995ರಲ್ಲಿ ನಿರ್ದಿಷ್ಟಪಡಿಸಿದ ಮೇಲುಸ್ಥರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ;

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ / ಪತ್ನಿ / ಪತಿಯಾಗಲಿ ಸರ್ಕಾರದ ಸೇವೆಯಲ್ಲಿ Iನೇ ದರ್ಜೆಯ ಅಥವಾ IIನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು; ಅಥವಾ

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ; ಅಥವಾ

ಖಾಸಗಿ ನಿಯೋಜಕರ ಕೈ ಕೆಳಗೆ, IIನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000-11200/- ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

ಅಥವಾ

ಆತನ / ಆಕೆಯ ತಂದೆ ತಾಯಿ/ಪೋಷಕ/ಪತ್ನಿ/ಪತಿಯು ಆದಾಯ ತೆರಿಗೆದಾರನಲ್ಲ ಅಥವಾ ಸಂಪತ್ತು ತೆರಿಗೆದಾರನಲ್ಲವೆಂದು ;

ಅಥವಾ

ಆತನ / ಆಕೆಯ ತಂದೆ ತಾಯಿ / ಪೋಷಕ / ಪತ್ನಿ / ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕ / ಪತ್ನಿ / ಪತಿಯು ಅಥವಾ ಇವರಿಬ್ಬರೂ 8 ಹೆಕ್ಟೇರಿಗಿಂತ ಹೆಚ್ಚಿನ ಮಳೆ ಆಧಾರಿತ ಅಥವಾ ಒಣ ಭೂಮಿ ಅಥವಾ ಅದಕ್ಕೆ ಸಮಾನವಾದ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಶ್ರೀ / ಶ್ರೀಮತಿ / ಕುಮಾರಿ .............................. ಇವರು ಹಿಂದುಳಿದ ವರ್ಗಗಳ .............................. ಪ್ರವರ್ಗಕ್ಕೆ ಸೇರಿರುತ್ತಾರೆ.

ಸ್ಥಳ : ತಹಶಿಲ್ದಾರ್

ದಿನಾಂಕ : ...................... ತಾಲ್ಲೂಕು

ಕಚೇರಿಯ ಮೊಹರು